KA / BG-GPO/2515/WPP-47/2009-2011



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಫೆಬ್ರವರಿ ೨೬, ೨೦೦೯ (ಫಾಲ್ಗುಣ ೭, ಶಕ ವರ್ಷ ೧೯೩೦)	ಸಂಚಿಕೆ ೯

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

OFFICE OF THE ASST. COMMISSIONER OF COMMERCIAL TAXES, LVO-130, BANGALORE

Notified Authority Under the Rule 6(i) of the CST (Karnataka) Rules 1957

NOTIFICATION

No. ACCT/LVO-130/08-09, Dated:31st January, 2009

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declaration in Form-C described below is declared to be obsolete and invalid.

Sl. No.	Number (including code No.) of declaration Forms Lost destroyed or stolen	Name & address of the dealer to whom declaration Forms is/ are issued by the department with date of C form issue	Registration certificate No. of the dealer under CST Act 1956	The address of the dealer to whom the declaration is/are sent	Date of issue of Form/s by the dealer	Whether Lost/ Stolen/ destroyed	Remarks
1.	'C' Form Nos. 2921515, 2921516, 4685934 & 4685935	M/s Rangsons Marketing INC., No.577, Abhishek Complex, 17th Cross, Sampige Road, Malleshwaram, Bangalore-560003.	TIN No. 29360086920	M/s. ITW.India Limited, Plot No.34 to 37, Phase-2, IDA, AP11C, Pashammylaram, Medak Dist-502307, Andra Pradesh.	6.10.2006 8.11.2007	Lost in transit	Value of the 'C' forms. 1,39,59,478/-

Assistant Commissioner of Commercial Taxes, LVO-130, Bangalore.

PROCEEDINGS OF ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE

Dated:23rd December, 2008

Present: M.Venkataramu

Asst: Commr. of Comml. Taxes.

Sub: Loss of 'C' Forms in case of M/s RANGSONS Marketing INC., Bangalore.

Read: Letter Dated:12.12.2008 of M/s RANGSONS Marketing INC.,

Preamble:

M/s. RANGSONS Marketing INC., No.577, Abhishek Complex, 17th Cross, Sampige Road, Malleshwaram, Bangalore-560003 is a registered dealer borns on the files of this office bearing TIN No.29360086920. The dealer in his letter cited at read above has intimated that they have been lost three 'C' Forms bearing No.2921515, 2921516, 4685934 & 4685935 issued by the department, is lost in transit.

The dealer has adduced the proof for having filed the complaint to police authorities for loss of above 'C' Forms and executed Indemnity Bond in favour of the Government as laid down under Rule 12(2) and 12(9) of CST Act, 1956.

In the instant case since the 'C' Forms mentioned as above, is stated to be lost in transit, the forms so lost is treated as invalid. Hence this order.

Order No. ACCT/LVO-130/ 534/2008-09, Dated:31st January, 2009

In view of the circumstances explained as above, the 'C' Form Nos. 2921515, 2921516, 4685934 & 4685935 (4 Nos) are treated as invalid with immediate effect.

Assistant Commissioner of Commercial Taxes, LVO-130, Bangalore-30.

PR-138

DEPARTMENT OF MINES AND GEOLOGY, BANGALORE

Notification No. DMG/AML/ADV/08-09, Dated:30th January, 2009

It is hereby informed for the mining public that the area noted below is available for re-grant under rule 59(1) of MCR 1960 as under:

1) This area is available for grant to the general public from the date of notification in the official gazette for a period of 60 days.

2) The applications will be received over this area from general public from the date of notification in the official gazette for a period of 60 days.

3) If the last day for receipt of application happens to be public holiday or general holiday, the application will be accepted on the next working day.

4) Any applications received after 60 days from the date of notification in official gazette days will not be considered.

The sketch of the area is available for verification at the office of the Director, Department of Mines and Geology, Khanijabhavan, Race Course Road, Bangalore-01 during working hours on all working days.

The prescribed applications and the sketches of the notified area can be obtained from the office of the Director, Department of Mines and Geology, Khanijabhavan, Race Course Road, Bangalore-01 on payment of prescribed fees.

The mining public should note the availability of the area published below is subject to the clearance from the Revenue Department, for mining activities and compliance of the provisions of the MM

(D & R) Act 1957 and MCR 1960 and all other relevant acts and rules by the applicants. In case, the area is found to consists of forest lands, the clearance from the forest department under section 2 of the forest Conservation) Act 1980, for utilizing the area for non-forest activities should be obtained by the applicant.

Interested persons are advised to inspect the area, satisfy themselves, about the availability of mineral deposits and the present status of the land there, in before, making application for mining lease.

Sl. No.	Mineral	Extent	Sy. No.	Location
1.	Limestone	1592.18 hect. (PL-3336)		Nirbudihal, Jalageri, Ganganabudihal, Karkalmatti, Halageri & Kagalgomb villages, Badami taluk, Bagalkote district.
2.	Quartz & Felspar	26.71 hect. (ML No.1811)	22	Kenchahalli Village, Nagamangala Taluk, Mandya District.

Director,

PR-130 Department of Mines and Geology, Bangalore.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಬಿಜಾಪೂರ ಜಿಲ್ಲೆ, ಬಿಜಾಪೂರ ರವರ ನ್ಯಾಯಾಲಯ ನಡುವಳಿಗಳು.

ಸಂಖ್ಯೆ : ಇಎಕ್ಸಇ/ಬಿಜೆಪಿ/ಡಿಟಿಸಿಆರ್/169/2007–08. ದಿನಾಂಕ:22ನೇ ಜನವರಿ, 2009

ಗುನ್ನೆ ನಂ: 18/2007–08. ದಿ: 24–04–2008

ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಉಪ ವಿಭಾಗ.

ಉಪಸ್ಥಿತರು: ಎನ್. ಎಂ. ವಜೀರ
ಪ್ರಾಧೀಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಬಿಜಾಪೂರ ಜಿಲ್ಲೆ, ಬಿಜಾಪೂರ.

ಪಿರ್ಯಾಧಿದಾರರು
ಅಬಕಾರಿ ಉಪ ನಿರೀಕ್ಷಕರು
ಬಿಜಾಪೂರ ಉಪ ವಿಭಾಗ

ವಿರುದ್ಧ

ಆರೋಪಿತರು
ಶಂಕರ ತಂದೆ ಮಲ್ಲಪ್ಪ ಸಂಗನಗೌಡರ ಸಾ॥ಇಬ್ರಾಹಿಂಪೂರ, ಬಿಜಾಪೂರ.

ಅರ್ಜಿದಾರರು
ಚಂದ್ರಶೇಖರ ಲಕ್ಷ್ಮಣ ದ್ಯಾಬೇರಿ ಸಾ॥ಬಸವನ ಬಾಗೇವಾಡಿ ರಸ್ತೆ, ಮನಗೂಳಿ ಅಗಸಿ, ಬಿಜಾಪೂರ. (ವಾಹನ ಮಾಲೀಕರು)

ಪ್ರಕರಣದ ಮುಖ್ಯಾಂಶಗಳು:

ದಿನಾಂಕ 24–04–2008 ರಂದು ಸಮಯ ಸಾಯಂಕಾಲ 4–00 ಗಂಟೆಗೆ ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಉಪ ವಿಭಾಗ ಇವರು ಪಂಚರನ್ನು ತಮ್ಮ ಕಚೇರಿಗೆ ಕರೆಯಿಸಿ, ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಹಾಗೂ ಉಪ ಆಯುಕ್ತರು ಬಿಜಾಪೂರ ಇವರ ಮಾರ್ಗದರ್ಶನದಂತೆ ವಿಧಾನಸಭೆಯ ಚುನಾವಣೆ ನಿಮಿತ್ಯವಾಗಿ ಅಕ್ರಮ ನಕಲಿ ಮದ್ಯ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಉದ್ದೇಶದಿಂದ ರಾಷ್ಟ್ರೀಯ ಹೆದ್ದಾರಿ ನಂ:13 ಸೋಲ್ಲಾಪೂರ ರಸ್ತೆಯಲ್ಲಿ ರಸ್ತೆ ಕಾವಲು ಹೊರಟಿದ್ದು, ಒಂದು ವೇಳೆ ಆ ಸಮಯದಲ್ಲಿ ಅಪರಾಧ ಪತ್ತೆ ಆದಲ್ಲಿ ತಾವುಗಳು ಪಂಚರಾಗಿ ಪಂಚನಾಮೆ ನಡೆಯಿಸಿ ಕೊಡಬೇಕೆಂದು ಕೇಳಿಕೊಂಡರು, ಅದಕ್ಕೊಪ್ಪಿದ ಅವರು ಅಬಕಾರಿ ಅಧಿಕಾರಿಗಳೊಂದಿಗೆ ಹೊರಡಲು ಸಿದ್ದರಾದರು. ನಂತರ ಅಬಕಾರಿ ಉಪ ನಿರೀಕ್ಷಕರು ಮತ್ತು ಸಿಬ್ಬಂಧಿ ಹಾಗೂ ಪೋಲಿಸ್ ನಿರೀಕ್ಷಕರು ಲಾಟರಿ ಮತ್ತು ಅಬಕಾರಿ ನಿಷೇಧ ದಳ ಬಿಜಾಪೂರವರು & ಸಿಬ್ಬಂದಿ ಜನರೆಲ್ಲರೂ ಕೂಡಿಕೊಂಡು ತಮ್ಮ ಕಚೇರಿಯಿಂದ ಹೊರಟು ರಾಷ್ಟ್ರೀಯ ಹೆದ್ದಾರಿ ನಂ:13 ಸೋಲ್ಲಾಪೂರ ರಸ್ತೆಯಲ್ಲಿ ರಸ್ತೆ ಕಾವಲು ಮಾಡುತ್ತಾ, ಮತ್ತು ಸಂಶಯುಕ್ತ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿರುವಾಗ, ಸುಮಾರು 11–00 ರಾತ್ರಿ ವೇಳೆಯಲ್ಲಿ ಸೋಲ್ಲಾಪೂರ ಕಡೆಯಿಂದ ಬಿಜಾಪೂರ ಮಾರ್ಗವಾಗಿ ಒಂದು ಆಟೋ ಬಂದಿತ್ತು. ಅಧಿಕಾರಿಗಳು ಅದನ್ನು ತಪಾಸಿಸಲು ನಿಲ್ಲಿಸಲು ಕೈ ಮಾಡಿದಾಗ ಸದರಿ ಅಟೋ ಚಾಲಕನು ನಿಲ್ಲಿಸದೇ ಅಟೋವನ್ನು ಹಾಗೇ

ವೇಗವಾಗಿ ಬಿಜಾಪೂರ ಕಡೆಗೆ ಓಡಿಸಿಕೊಂಡು ಹೋಗಿದ್ದು, ತಕ್ಷಣವೇ ಅಧಿಕಾರಿಗಳು ತಮ್ಮ ಕಛೇರಿ ವಾಹನ ಸಂಖ್ಯೆ ಕೆಎ–22–ಜಿ–209 ನೇದ್ದರಲ್ಲಿ ಸದರಿ ಅಟೋವನ್ನು ಹಿಂಬಾಲಿಸಿ, ಬಂಜಾರ ಕ್ರಾಸ ಹತ್ತಿರ ಅಟೋವನ್ನು ನಿಲ್ಲಿಸಿ, ಅಟೋದಲ್ಲಿ ಏನಿದೆ ಎಂದು ನೋಡಲಾಗಿ ಮೂರು ಬಿಳಿ ಬಣ್ಣದ ಕ್ಯಾನುಗಳು ಇದ್ದದು ಕಂಡು ಆ ಸದರಿ ಬಿಳಿ ಕ್ಯಾನುಗಳಲ್ಲಿ ಏನು ಇದೆ ಅಂತಾ ನೋಡಲಾಗಿ ಅವುಗಳಲ್ಲಿ 105 ಲೀಟರದಷ್ಟು ಮದ್ಯಸಾರ ಇದದ್ದು ಕಂಡು ಸದರಿ ಅಟೋ ಚಾಲಕನನ್ನು ಈ ರೀತಿ ಮದ್ಯಸಾರ ಸಾಗಾಣಿಕೆ ಮಾಡಲು ಸರ್ಕಾರದಿಂದ ಲೈಸೆನ್ಸ್ ವ ಪರವಾನಿಗೆ ಇದೆಯೇ ಅಂತಾ ಅಧಿಕಾರಿಗಳು ವಿಚಾರಿಸಲಾಗಿ ಆತ ಇಲ್ಲ ಅಂತಾ ತಿಳಿಸಿದ ಆಗ ಅಧಿಕಾರಿಗಳು ಆತನ ಹೆಸರು ವಿಚಾರಿಸಲಾಗಿ ತನ್ನ ಹೆಸರು ಶಂಕರ ತಂದೆ ಮಲ್ಲಪ್ಪ ಸಂಗನಗೌಡರ ಸಾ॥ಇಬ್ರಾಹಿಂಪೂರ, ಬಿಜಾಪೂರ ಅಂತಾ ತಿಳಿಸಿದನು. ತಕ್ಷಣವೇ ಅಧಿಕಾರಿಗಳು ಆತನನ್ನು ಬಂಧಿಸಿ, ಅಟೋವನ್ನು ನೋಡಲಾಗಿ ಅದರ ನಂ:ಕೆಎ–28–ಎ–345 ಇದದ್ದು ತಿಳಿದುಕೊಂಡು,. ಮೂರು ಕ್ಯಾನುಗಳಿಂದ 750 ಮಿಲಿಯ ಬಾಟಲಿಗಳಲ್ಲಿ ಮದ್ಯಸಾರವನ್ನು ಮಾದರಿಗಾಗಿ ತೆಗೆದು ಸರ್ಕಾರಿ ಶೀಲ ಮಾಡಿ, ಪಂಚರು ಹಾಗೂ ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಉಪ ವಿಭಾಗ ಇವರ ಸಹಿ ಮಾಡಿದ ಚೀಟಿಗಳನ್ನು ಅಂಟಿಸಿ, ಸದರಿ ಎಲ್ಲಾ ಮುದ್ದೇಮಾಲುಗಳಾದ ಮದ್ಯಸಾರ ಮತ್ತು ಅದನ್ನು ಸಾಗಿಸಲಾಗುತ್ತಿದ್ದ ಅಟೋ ನಂ:ಕೆಎ–28–ಎ–345 ನೇದ್ದನ್ನು ಸವಿಸ್ತಾರವಾಗಿ ಪಂಚನಾಮೆ ಬರೆದು ಜಪ್ತಿ ಪಡಿಸಿಕೊಂಡಿರುತ್ತಾರೆ. ನಂತರ ಸದರಿ ಅಧಿಕಾರಿಗಳು ಆರೋಪಿ ಹಾಗೂ ಮುದ್ದೇಮಾಲಗಳೊಂದಿಗೆ ಕಛೇರಿಗೆ ಹಿಂದುರುಗಿ ಆರೋಪಿತನ ವಿರುದ್ಧ ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಉಪ ವಿಭಾಗ ಇವರು ಗುನ್ನೆ ನಂ:18/2007–08 ನೇದ್ದನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಮುಂದಿನ ತನಿಖೆಗೋಸ್ಕರ ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಇವರಿಗೆ ಹಸ್ತಾಂತರಿಸಿರುತ್ತಾರೆ.

ನಂತರ ತನಿಖಾಧಿಕಾರಿಗಳು ರಸಾಯನಿಕ ಮಾದರಿಯನ್ನು ರಸಾಯನಿಕ ತಜ್ಞರಿಗೆ ಕಳುಹಿಸಿ ವರದಿ ಪಡೆದಿರುತ್ತಾರೆ. ರಸಾಯನಿಕ ತಜ್ಞರ ವರದಿ ಸಂ:ಸಿಸಿಎಲ್.2728/2008 ದಿನಾಂಕ : 24–06–2008 ರ ವರದಿಯಲ್ಲಿ ಸದರ ಮದ್ಯಸಾರದಲ್ಲಿ ಈಥೈಲ್ ಅಲ್ಕೋಹಾಲ್ ಅಂಶ ಇದೆಯಂದು ಕಂಡುಹಿಡಿದಿರುತ್ತಾರೆ, ಇದು ಮಾನವನ ಸೇವನೆಗೆ ಬಳಸಬಹುದಾದ ಮದ್ಯವನ್ನು ತಯಾರಿಸಲು ಯೋಗ್ಯ ಇರುವುದಾಗಿ ದೃಢಪಡಿಸಿರುತ್ತಾರೆ. ನಂತರ ಈ ಪ್ರಾಧೀಕಾರದಿಂದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬಿಜಾಪೂರ ಇವರಿಗೆ ಜಪ್ತು ಮಾಡಿದ ವಾಹನದ ಬಿ–ಎಕ್ಸಟ್ರ್ಯಾಕ್ಟ ಕಳುಹಿಸಲು ಕೋರಿ ಪತ್ರ ಬರೆಯಲಾಗಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬಿಜಾಪೂರ ಇವರು ಸದರಿ ವಾಹನದ ಬಿ–ಎಕ್ಸಟ್ರ್ಯಾಕ್ಟನಲ್ಲಿ ವಾಹನ ನಂ:ಕೆಎ–28–ಎ–345 ರ ಮಾಲೀಕರ ಹೆಸರು ಶ್ರೀ.ಚಂದ್ರಶೇಖರ ಲಕ್ಷ್ಮಣ ದ್ಯಾಬೇರಿ ಸಾ॥ಬಸವನ ಬಾಗೇವಾಡಿ ರಸ್ತೆ, ಮನಗೂಳಿ ಅಗಸಿ, ಬಿಜಾಪೂರ ಅಂತಾ ತಿಳಿಸಿರುತ್ತಾರೆ.

ದಿನಾಂಕ 21–08–2008 ರಂದು ವಾಹನ ಮಾಲೀಕರಾದ ಶ್ರೀ.ಚಂದ್ರಶೇಖರ ಲಕ್ಷ್ಮಣ ದ್ಯಾಬೇರಿ ಇವರಿಗೆ ಈ ಪ್ರಾಧೀಕಾರವು ಕರ್ನಾಟಕ ಅಬಕಾರಿ ಕಾಯ್ದ ಕಲಂ:43(ಬಿ) ಕೆಳಗಡೆ ವಾಹನ ಮಾಲೀಕರಿಗೆ ಕಾರಣ ಕೇಳುವ ನೋಟಿಸನ್ನು ಹೊರಡಿಸಲಾಗಿದ್ದು, ವಾಹನದ ಮಾಲೀಕ ಶ್ರೀ.ಚಂದ್ರಶೇಖರ ಲಕ್ಷ್ಮಣ ದ್ಯಾಬೇರಿ ಇವರ ಪರವಾಗಿ ದಿನಾಂಕ 27–08–2008 ರಂದು ವಕೀಲರಾದ ಶ್ರೀ. ಆರ್. ಎಸ್. ಗರುಡಿಮನಿ ಇವರು ಅರ್ಜಿ ಸಲ್ಲಿಸಿ, ವಾಹನವನ್ನು ತಾತ್ಕಾಲಿಕವಾಗಿ ತಮ್ಮ ವಶಕ್ಕೆ ಬಿಟ್ಟುಕೊಡಬೇಕೆಂದು ಕೋರಿರುತ್ತಾರೆ. ಈ ಪ್ರಾಧಿಕಾರವು ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಿ, ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಎ) ರ ಅನ್ವಯ ವಿಚಾರಣೆ ನಡೆಸಲು ದಿನಾಂಕ : 22–01–2009 ರಂದು ದಿನಾಂಕವನ್ನು ನಿಗಧಿ ಪಡಿಸಿ ಸಂಬಂಧಪಟ್ಟ ಎಲ್ಲಾ ಸಾಕ್ಷಿದಾರರಾಗಿ ನೋಟಿಸನ್ನು ಹೊರಡಿಸಲಾಯಿತು.

ದಿನಾಂಕ:22–01–2009 ರಂದು ವಿಚಾರಣೆಯನ್ನು ನಡೆಸಲಾಯಿತು. ಸರ್ಕಾರದ ಪರವಾಗಿ ಎ.ಡಿ.ಪಿ ಯವರು ಹಾಗೂ ವಾಹನ ಮಾಲಿಕರಾದ ಶ್ರೀ. ಶ್ರೀ.ಚಂದ್ರಶೇಖರ ಲಕ್ಷ್ಮಣ ದ್ಯಾಬೇರಿ ಇವರ ಹಾಜರಿರುತ್ತಾರೆ. ಸದರಿ ದಿನದಂದು ವಿಚಾರಣೆಯನ್ನು ಜರುಗಿಸಬೇಕೆಂದು ಪ್ರಾಧೀಕಾರದ ಮುಂದೆ ವಿನಂತಿಸಿದರು. ಮತ್ತು ಅರ್ಜಿ ಸಲ್ಲಿಸಿದರು. ನಂತರ ಅಭಿಯೋಗದ ಪರವಾಗಿ ಸಾಕ್ಷಿದಾರರಾದ ಪ್ರಾ.ಸಾ–1, ಪ್ರಾ.ಸಾ–2, ಪ್ರಾ.ಸಾ–3 ವಿಚಾರಣೆ ಮಾಡಿ ನಾಲ್ಕು (04) ದಾಖಲಾತಿಗಳನ್ನು ಮತ್ತು ಎರಡು ಮುದ್ದೇಮಾಲುಗಳನ್ನು ಗುರುತಿಸಿದ್ದು ಇರುತ್ತದೆ.

ಪ್ರಾ.ಸಾ–1 ಇವರು ಪಿರ್ಯಾಧಿದಾರರಾಗಿ ಸಾಕ್ಷಿ ನುಡಿಯುತ್ತಾ, ದಿನಾಂಕ 24–04–2008 ರಂದು ಸಮಯ ಸಾಯಂಕಾಲ 4–30 ಗಂಟೆ ವೇಳೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಹಾಗೂ ಉಪ ಆಯುಕ್ತರು ಬಿಜಾಪೂರ ಇವರ ಮಾರ್ಗದರ್ಶನದಂತೆ ವಿಧಾನಸಭೆಯ ಚುನಾವಣೆ ನಿಮಿತ್ಯವಾಗಿ ರಾಷ್ಟ್ರೀಯ ಹೆದ್ದಾರಿ ನಂ:13 ಸೋಲ್ಲಾಪೂರ ರಸ್ತೆಯಲ್ಲಿ ರಸ್ತೆ ಕಾವಲು ಮಾಡುತ್ತಾ, ಮತ್ತು ಸಂಶಯುಕ್ತ ವಾಹನಗಳನ್ನು ತಪಾಸಣೆ ಮಾಡುತ್ತಿದ್ದು, ಆ ಸಮಯದಲ್ಲಿ ಇಬ್ಬರು ಪಂಚರು, ಪೋಲಿಸ್ ನಿರೀಕ್ಷಕರು ಲಾಟರಿ ಮತ್ತು ಅಬಕಾರಿ ನಿಷೇಧದಳ ಬಿಜಾಪೂರವರು, ಹಾಗೂ ಸಿಬ್ಬಂದಿ ಜನರೆಲ್ಲರೂ ಕೂಡಿಕೊಂಡು ರಸ್ತೆಕಾವಲು ಮಾಡುತ್ತಾ ಸಾಯಾಂಕಾಲ ಸುಮಾರು 4–30 ಗಂಟೆಯಿಂದ ನಿಲ್ಲಲಾಗಿತ್ತು. ಸುಮಾರು 11–00 ರಾತ್ರಿ ವೇಳೆಯಲ್ಲಿ ಸೋಲ್ಲಾಪೂರ ಕಡೆಯಿಂದ ಬಿಜಾಪೂರ ಮಾರ್ಗವಾಗಿ ಒಂದು ಅಟೋ ಬಂದಿತ್ತು. ಅದನ್ನು ತಪಾಸಿಸಲು

ನಿಲ್ಲಿಸಲು ಕೈ ಮಾಡಿದಾಗ ಸದರಿ ಅಟೋ ಚಾಲಕನು ನಿಲ್ಲಿಸದೇ ಅಟೋವನ್ನು ಹಾಗೇ ವೇಗವಾಗಿ ಬಿಜಾಪೂರ ಕಡೆಗೆ ಓಡಿಸಿಕೊಂಡು ಹೋಗುಹತ್ತಿದ, ತಕ್ಷಣವೇ ಕಛೇರಿ ವಾಹನ ಸಂಖ್ಯೆ ಕೆಎ–22–ಜಿ–209 ನೇದ್ದರಲ್ಲಿ ಸದರಿ ಅಟೋವನ್ನು ಹಿಂಬಾಲಿಸಿದೆವು, ಬಂಜಾರ ಕ್ರಾಸ ಹತ್ತಿರ ಅಟೋವನ್ನು ನಿಲ್ಲಿಸಿ, ಅಟೋದಲ್ಲಿ ಏನಿದೆ ಎಂದು ನೋಡಲಾಗಿ ಮೂರು ಬಿಳಿ ಬಣ್ಣದ ಕ್ಯಾನುಗಳು ಇದ್ದದು ಕಂಡು ಬಂದಿತ್ತು. ಆ ಸದರಿ ಬಿಳಿ ಕ್ಯಾನುಗಳಲ್ಲಿ ಏನು ಇದೆ ಅಂತಾ ನೋಡಲಾಗಿ ಅವುಗಳಲ್ಲಿ 105 ಲೀಟರದಷ್ಟು ಮದ್ಯಸಾರ ಇದದ್ದು ಕಂಡು ಬಂದಿತ್ತು. ಸದರಿ ಅಟೋ ಚಾಲಕನನ್ನು ಈ ರೀತಿ ಮದ್ಯಸಾರ ಸಾಗಾಣಿಕೆ ಮಾಡಲು ಸರ್ಕಾರದಿಂದ ಲೈಸನ್ಸ್ ವ ಪರವಾನಿಗೆ ಇದೆಯೇ ಅಂತಾ ವಿಚಾರಿಸಲಾಗಿ ಆತ ಇಲ್ಲ ಅಂತಾ ತಿಳಿಸಿದ ಆತನ ಹೆಸರು ವಿಚಾರಿಸಲಾಗಿ ತನ್ನ ಹೆಸರು ಶಂಕರ ತಂದೆ ಮಲ್ಲಪ್ಪ ಸಂಗನಗೌಡರ ಸಾ॥ಇಬ್ರಾಹಿಂಪೂರ, ಬಿಜಾಪೂರ ಅಂತಾ ತಿಳಿಸಿದನು. ತಕ್ಷಣವೇ ಆತನನ್ನು ಬಂಧಿಸಿ, ಅಟೋವನ್ನು ನೋಡಲಾಗಿ ಅದರ ನಂ:ಕೆಎ–28–ಎ–345 ಇದದ್ದು ಕಂಡು ಬಂದಿತ್ತು. ಮೂರು ಕ್ಯಾನುಗಳಿಂದ 750 ಮಿಲಿಯ ಬಾಟಲಿಗಳಲ್ಲಿ ಮದ್ಯಸಾರವನ್ನು ಮಾದರಿಗಾಗಿ ತೆಗೆದು ಸರ್ಕಾರಿ ಶೀಲ ಮಾಡಿ, ಪಂಚರು ಹಾಗೂ ನಾವು ಸಹಿ ಮಾಡಿದ ಚೀಟಿಗಳನ್ನು ಅಂಟಿಸಿ, ಸದರಿ ಎಲ್ಲಾ ಮುದ್ದೇಮಾಲುಗಳಾದ ಮದ್ಯಸಾರ ಮತ್ತು ಅದನ್ನು ಸಾಗಿಸಲಾಗುತ್ತಿದ್ದ ಅಟೋ ನಂ:ಕೆಎ–28–ಎ–345 ನೇದ್ದನ್ನು ಸವಿಸ್ತಾರವಾಗಿ ಪಂಚನಾಮೆ ಬರೆದು ಜಪ್ತಿ ಪಡಿಸಿಕೊಳ್ಳಲಾಯಿತು. ಸದರಿ ಜಪ್ತು ಪಡಿಸಿದ ಮುದ್ದೇಮಾಲುಗಳನ್ನು ಈಗ ನೋಡುತ್ತಿದ್ದು, ಅದನ್ನು ಎಂಓ–1 ಎಂದು ಮತ್ತು ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿಶಾನಿ–ಪಿ–1 ಎಂದು ಹಾಗೂ ಅದರ ಮೇಲಿರುವ ತಮ್ಮ ಸಹಿಯನ್ನು ನಿಶಾನಿ–ಪಿ–1(ಎ) ಎಂದು ಗುರುತಿಸಿರುತ್ತಾರೆ. ನಂತರ ಆರೋಪಿ ಹಾಗೂ ಮುದ್ದೇಮಾಲಗಳೊಂದಿಗೆ ಕಛೇರಿಗೆ ಹಿಂದುರುಗಿ ಆರೋಪಿತನ ವಿರುದ್ಧ ಅಬಕಾರಿ ಗುನ್ನೆ ನಂ:18/2007–08 ನೇದ್ದಕ್ಕೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಡಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ–ಪಿ–2 ಎಂದು & ಅದರ ಮೇಲಿರುವ ತಮ್ಮ ಸಹಿಯನ್ನು ನಿಶಾನೆ–ಪಿ–2(ಎ) ಎಂದು ಗುರುತಿಸಿರುತ್ತಾರೆ. ಸದರಿ ಪ್ರಕರಣವನ್ನು ಮುಂದಿನ ತನಿಖೆಗೋಸ್ಕರ ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಇವರಿಗೆ ಹಸ್ತಾಂತರಿಸಲಾಗಿರುತ್ತದೆಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿದಾರರ ಸಾಕ್ಷಿ ಹೇಳುವ ಸಮಯದಲ್ಲಿ ವಾಹನ ಮಾಲೀಕರು ಹಾಜರಿದ್ದು ಯಾವುದೇ ಪಾಟಿ ಸವಾಲು ಮಾಡಿರುವುದಿಲ್ಲಾ. ಇದರಿಂದ ಸದರಿ ವಾಹನ ಅಕ್ರಮ ಮದ್ಯಸಾರ ಸಾಗಾಣಿಕೆಯಲ್ಲಿ ತೊಡಗಿರುವುದಕ್ಕೆ ಪುಷ್ಠಿ ನೀಡುತ್ತದೆ.

ಪ್ರಾ.ಸಾ–2 ಇವರು ಪಂಚ ಸಾಕ್ಷಿಯಾಗಿದ್ದು, ಸಾಕ್ಷಿ ನುಡಿಯುತ್ತಾ ದಿನಾಂಕ 24–04–2008 ರಂದು ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಉಪ ವಿಭಾಗ ಇವರು ರಾಷ್ಟ್ರೀಯ ಹೆದ್ದಾರಿ ನಂ:13 ರ ಮೇಲೆ ರಸ್ತೆ ಕಾವಲು ಮಾಡಲು ಕರೆದಿದ್ದು, ಅದಕ್ಕೆ ಅವರೊಂದಿಗೆ ರಸ್ತೆ ಕಾವಲು ಮಾಡುತ್ತಾ ಇದ್ದಾಗ ಸೋಲ್ಲಾಪೂರ ಕಡೆಯಿಂದ ರಾತ್ರಿ ಸುಮಾರು 11–00 ರ ವೇಳೆಯಲ್ಲಿ ಒಂದು ಅಟೋ ಬಂದಿದ್ದು, ಅದನ್ನು ಅಬಕಾರಿ ಅಧಿಕಾರಿಗಳು ಕೈ ಮಾಡಿ ನಿಲ್ಲಿಸಲು ಸೂಚನೆ ನೀಡಿದಾಗ್ಯೂ ಕೂಡಾ ಸದರಿ ಚಾಲಕ ನಿಲ್ಲಿಸದೆ ಹಾಗೇ ಅಟೋವನ್ನು ಬಿಜಾಪೂರದ ಕಡೆಗೆ ಓಡಿಸುತ್ತಿದ್ದು, ಅದಕ್ಕೆ ಅಧಿಕಾರಿಗಳು ತಮ್ಮ ಜೀಪನಲ್ಲಿ ಸದರಿ ಅಟೋವನ್ನು ಹಿಂಬಾಲಿಸಿ ಅದನ್ನು ಬಂಜಾರ ಕ್ರಾಸ ಹತ್ತಿರ ತಡೆದು ನಿಲ್ಲಿಸಿ, ಸದರಿ ಅಟೋ ಚಾಲಕನನ್ನು ವಿಚಾರಿಸಲಾಗಿ ಸದರಿ ಅಟೋದಲ್ಲಿ ಮೂರು ಬಿಳಿ ಬಣ್ಣದ ಕ್ಯಾನುಗಳಿದ್ದು, ಅವುಗಳಲ್ಲಿ ಸುಮಾರು 105 ಲೀಟರದಷ್ಟು ಮದ್ಯಸಾರ ಇದ್ದದ್ದು ಕಂಡು ಬಂದಿತ್ತು. ಚಾಲಕನ ಹೆಸರನ್ನು ವಿಚಾರಿಸಿ, ಸದರಿ ಮದ್ಯಸಾರವನ್ನು ಸಾಗಾಣೆ ಮಾಡಲು ಆತನ ಹತ್ತಿರ ಲೈಸನ್ಸ್ ಇದ್ದ ಬಗ್ಗೆ ಅಧಿಕಾರಿಗಳು ವಿಚಾರಿಸಲಾಗಿ ತನ್ನ ಹತ್ತಿರ ಯಾವುದೇ ಲೈಸನ್ಸ್ ಇರುವುದಿಲ್ಲಾ ಅಂತಾ ತಿಳಿಸಿದ. ಅಧಿಕಾರಿಗಳು ಸದರಿ ಕ್ಯಾನುಗಳಿಂದ ಮಾದರಿಗಾಗಿ ಬಾಟಲಿಗಳಲ್ಲಿ ಮದ್ಯಸಾರವನ್ನು ತೆಗೆದು ಶೀಲ ಮಾಡಿ ನಮ್ಮ ಹಾಗೂ ಅಧಿಕಾರಿಗಳ ಸಹಿ ಮಾಡಿದ ಚೀಟಿಗಳನ್ನು ಅಂಟಿಸಿ, ಸವಿಸ್ತಾರವಾಗಿ ಪಂಚನಾಮೆ ಬರೆದು, ಮದ್ಯಸಾರವನ್ನು, ಅಟೋವನ್ನು ಜಪ್ತಿ ಪಡಿಸಲಾಯಿತು. ಸ್ಥಳದಲ್ಲಿಯೇ ಆರೋಪಿತನನ್ನು ದಸ್ತಗಿರಿ ಮಾಡಲಾಯಿತು. ಈಗ ತೋರಿಸಿದ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.–1 ಅಂತಾ ಗುರುತಿಸಲಾಗಿದ್ದು, ಅದರ ಮೂಲ ಪ್ರತಿಯ ಮೇಲಿನ ಸಹಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ–1(ಬಿ) ಅಂತಾ ಗುರುತಿಸಲಾಯಿತು. ಸದರಿ ದಿನದಂದು ಜಪ್ತು ಮಾಡಿದ ಅಟೋವನ್ನು ನೋಡುತ್ತಿದ್ದು, ಅದನ್ನೆ ಅಧಿಕಾರಿಗಳು ನಮ್ಮ ಸಮಕ್ಷಮದಲ್ಲಿ ಜಪ್ತಿ ಮಾಡಿದ್ದು, ಅದನ್ನು ಈಗಾಗಲೇ ಮುದ್ದೇಮಾಲ ನಂ:1 ಎಂದು ಗುರುತಿಸಲಾಗಿದೆ. ಸದರಿ ಪಂಚನಾಮೆಯನ್ನು ಮದ್ಯರಾತ್ರಿ ವೇಳೆಯಲ್ಲಿ ತಯಾರಿಸಲಾಗಿರುತ್ತದೆ. ಜಪ್ತು ಮಾಡಿದ ಎಲ್ಲಾ ವಸ್ತುಗಳನ್ನು ಅಬಕಾರಿ ಅಧಿಕಾರಿಗಳು ತಮ್ಮ ತಾಬಾಕ್ಕೆ ತೆಗೆದುಕೊಂಡು ಆರೋಪಿತನನ್ನು ದಸ್ತಗಿರಿ ಮಾಡಿ ತಮ್ಮ ತಾಬಾಕ್ಕೆ ತೆಗೆದುಕೊಂಡಿರುತ್ತಾರೆಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿದಾರರ ಸಾಕ್ಷಿ ಹೇಳುವ ಸಮಯದಲ್ಲಿ ವಾಹನ ಮಾಲೀಕರು ಹಾಜರಿದ್ದು ಈ ಪಂಚ ಸಾಕ್ಷಿಗೂ ಕೂಡಾ ಯಾವುದೇ ಪಾಟಿ ಸವಾಲು ಮಾಡಿರುವುದಿಲ್ಲಾ. ಇದರಿಂದ ಸದರಿ ವಾಹನ ಅಕ್ರಮ ಮದ್ಯಸಾರ ಸಾಗಾಣಿಕೆಯಲ್ಲಿ ತೊಡಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಪ್ರಾ.ಸಾ–3 ಇವರು ಪ್ರಕರಣದ ತನಿಖಾಧಿಕಾರಿಯಾಗಿ ಸಾಕ್ಷಿ ನುಡಿಯುತ್ತಾ, ಈ ಪ್ರಕರಣದ ಮುಂದಿನ ತನಿಖೆಯನ್ನು ದಿನಾಂಕ 30–04–2008 ರಂದು ಪಡೆದುಕೊಂಡು ದಿನಾಂಕ 23–06–2008 ರಂದು ಅಬಕಾರಿ ರಕ್ಷಕರಾದ ಎಸ್.ಎಂ.ಹುದ್ದಾರ ರವರ ಮುಖಾಂತರ ಮಾದರಿಗಾಗಿ ತೆಗೆದ ಮದ್ಯಸಾರಗಳ 03 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರಿಗೆ ಕಳುಹಿಸಿಕೊಟ್ಟೆ. ದಿನಾಂಕ:25–06–2008 ರಂದು ರಸಾಯನಿಕ ಪರಿವೀಕ್ಷಕರು ತಮ್ಮ ವರದಿಯನ್ನು ನೀಡಿದ್ದು, ಅದರಲ್ಲಿ ಮದ್ಯಸಾರವು ಮದ್ಯ ತಯಾರಿಸಲು ಯೋಗ್ಯವಾಗಿರುತ್ತದೆ ಅಂತಾ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯ ಪ್ರತಿಯನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.–3 ಅಂತಾ ಗುರುತಿಸಲಾಯಿತು. ದಿನಾಂಕ: 17–09–2008 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬಿಜಾಪೂರರವರಿಗೆ ಸದರಿ ಜಪ್ತು ಪಡಿಸಲಾದ ಕೆಎ–28–ಎ–345 ನೇದ್ದರ ಬಿ–ಎಕ್ಸಟ್ರ್ಯಾಕ್ಟ ಕಳುಹಿಸಿಕೊಡಲು ಕೋರಿಕೊಂಡೆ, ಅದೇ ದಿನ ಬಿ–ಎಕ್ಸ್‌ಟ್ರ್ಯಾಕ್ಟನ್ನು ಕಳುಹಿಸಿಕೊಡಲಾಗಿದ್ದು, ಅದನ್ನು ಈಗ ನೋಡುತ್ತಿದ್ದು ನಿ.ಪಿ.–4 ಅಂತಾ ಗುರುತಿಸಲಾಯಿತು. ವಾಹನದ ಮಾಲೀಕರು ಚಂದ್ರಶೇಖರ ತಂದೆ ಲಕ್ಷ್ಮಣ ದ್ಯಾಬೇರಿ ಅಂತಾ ಸದರಿ ವರದಿಯಿಂದ ತಿಳಿದು ಬಂದಿತ್ತು. ದಿನಾಂಕ:26–06–2008 ರಂದು ಪ್ರಾಧೀಕೃತ ಅಧಿಕಾರಿಗಳಿಗೆ ಸದರಿ ಜಪ್ತು ಪಡಿಸಿದ ಮುದ್ದೇಮಾಲನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿ ಕೊಂಡಿದ್ದು, ಪ್ರಾಧೀಕೃತ ಅಧಿಕಾರಿಗಳು ಅಟೋ ರೀಕ್ಷಾ ಹೊರತು ಪಡಿಸಿ ಉಳಿದ ಮದ್ಯಸಾರವನ್ನು ನಾಶ ಪಡಿಸಲು ಆದೇಶ ಮಾಡಿದ ಮೇರೆಗೆ ದಿನಾಂಕ : 05–08–2008 ರಿಂದ 08–08–2008 ರವರೆಗೆ ಪಂಚನಾಮೆ ಅಡಿಯಲ್ಲಿ ಸದರಿ ಮದ್ಯಸಾರವನ್ನು ನಾಶ ಪಡಿಸಲಾಯಿತು. ತನಿಖೆ ಪೂರ್ಣಗೊಂಡಿರುವುದರಿಂದ ದೋಷಾರೋಪಣಾಪಟ್ಟಿಯನ್ನು ದಿನಾಂಕ–19–11–2008 ರಂದು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಜಪ್ತು ಪಡಿಸಲಾದ ಅಟೋ ಸಂಖ್ಯೆ :ಕೆಎ–28–ಎ–345 ನೇದ್ದನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮುದ್ದೇಮಾಲು–1 ಅಂತಾ ಗುರುತಿಸಲಾಗಿರುತ್ತದೆಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿದಾರರ ಸಾಕ್ಷಿ ಹೇಳುವ ಸಮಯದಲ್ಲಿ ವಾಹನ ಮಾಲೀಕರು ಹಾಜರಿದ್ದು, ಯಾವುದೇ ಪಾಟಿ ಸವಾಲು ಮಾಡಿರುವುದಿಲ್ಲಾ. ಆದರೆ ವಾಹನ ಮಾಲಿಕರು ಸದರಿ ದಿನದಂದು ಜಪ್ತಾದ ವಾಹನವು ನನ್ನ ಹೆಸರಿನಲ್ಲಿದ್ದು, ಸದರಿ ಅಟೋವನ್ನು ಈ ಪ್ರಕರಣದಲ್ಲಿ ಆರೋಪಿತನಾದ ಶಂಕರ ಮಲ್ಲಪ್ಪ ಸಂಗನಗೌಡರ ಈತನಿಗೆ ಬಾಡಿಗೆಯ ಮೇಲೆ ನೀಡಿದ್ದು, ಈತನು ಸದರಿ ಅಟೋದಲ್ಲಿ ಮದ್ಯಸಾರ ಸಾಗಾಣಿಕೆ ಅಪರಾಧವೆಸಗಿರುತ್ತಾನೆ. ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯಾವುದೇ ತಂಟೆ, ತಕರಾರು ಇರುವುದಿಲ್ಲಾವೆಂದು ಲಿಖಿತವಾಗಿ ಈ ಪ್ರಾಧೀಕಾರದ ಮುಂದೆ ಎಲ್ಲರ ಸಮಕ್ಷಮ ಅರ್ಜಿ ಸಲ್ಲಿಸಿರುತ್ತಾನೆ.

ಪ್ರಾಸ್ಯೂಕೆಶನ ಪರ ಸಾಕ್ಷಿ ಹಾಗೂ ಎ.ಡಿ.ಪಿ. ರವರ ವಾದದ ಅಧಾರದ ಮೇಲೆ ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾದಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

:ಮೊದಲನೆಯ ವಿವಾದಾಂಶ:

ದಿನಾಂಕ:24–04–2008 ರಂದು ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32,34 ರೀತ್ಯಾ ಅಪರಾಧವಾಗಿದೆಯೇ? ಅಥವಾ ಇಲ್ಲಾ?

:ಎರಡನೆಯ ವಿವಾದಾಂಶ:

ಸದರಿ ವಾಹನದಲ್ಲಿ ಅಕ್ರಮ ಮದ್ಯಸಾರ ಸಾಗಾಣಿಕೆಯಾಗಿರುವ ಬಗ್ಗೆ ತನ್ನ ತಿಳುವಳಿಕೆಗೆ ಬಾರದೇ ಅಥವಾ ತಾನು ಶಾಮೀಲಾಗದೇ ನಡೆದಿದೆ ಎಂಬುದರ ಬಗ್ಗೆ ಅರ್ಜಿದಾರನಾಗಲೀ ಅಥವಾ ವಾಹನ ಚಾಲಕರಾಗಲೀ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲಾ?

:ಮೂರನೇಯ ವಿವಾದಾಂಶ:

ವಾಹನವು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಿಕ್ಕೆ ಯೋಗ್ಯವಾಗಿದಿಯೇ? ಅಥವಾ ಇಲ್ಲಾ?

:ಮೊದಲನೆಯ ವಿವಾದಾಂಶಕ್ಕೆ ಉತ್ತರ–ಸಕಾರಾತ್ಮಕ (ಹೌದು):

ಪ್ರಾಸ್ಯೂಕೆಶನ ಸಾಕ್ಷಿ ನುಡಿದ ಪಿರ್ಯಾಧಿದಾರರು ನೀಡಿರುವ ಹೇಳಿಕೆಯನ್ನು ಗಮನಿಸಿದಾಗ ಮಹಜರದಲ್ಲಿ ಇರುವ ಅಂಶಗಳನ್ನು ಪ್ರಬಲವಾಗಿ ಸಮರ್ಥಿಸುತ್ತಾರೆ. ಮಾಲು ಜಪ್ತು ಹಾಗೂ ಪಂಚರ ಸಾಕ್ಷಿದಾರರು ಸಾಕ್ಷಿಯು ಕೂಡಾ ಪಿರ್ಯಾಧಿಯ ಸಾಕ್ಷಿಗೆ ಪೂರಕವಾಗಿದೆ. ಪ್ರಕರಣದಲ್ಲಿ ಆರೋಪಿಸಿರುವ ಅಂಶವಾದ ಸದರಿ ವಾಹನದಲ್ಲಿ ಸಾಗಾಣಿಕೆ ಮಾಡಲ್ಪಟ್ಟಿದ್ದು ಈಥೈಲ್ ಅಲ್ಕೋಹಾಲ ಎಂಬುದು ರಸಾಯನಿಕ ವಿಶ್ಲೇಷಣೆಯ ವರದಿಯಿಂದ ದೃಢಪಟ್ಟಿರುತ್ತದೆ. ಸದರಿ ಮದ್ಯಸಾರ ಸಾಗಾಣಿಕೆಗೆ ಸಂಬಂಧಪಟ್ಟ ದಾಖಲಾತಿಗಳು ವಾಹನದಲ್ಲಿ ಇಲ್ಲದಿರುವ ಅಂಶವನ್ನು ಗಮನಿಸಿದಾಗ ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದು ಸ್ಪಷ್ಟವಾಗಿ ಸಾಬೀತವಾಗಿದೆ. ಸದರಿ ವಾಹನದಲ್ಲಿ ಮದ್ಯಸಾರ ಸಾಗಿಸಿದ ಬಗ್ಗೆ ಎದುರುದಾರರಿಂದ ಯಾವುದೇ ರೀತಿಯ ಅಭ್ಯಂತರ ವ್ಯಕ್ತವಾಗಿರುವುದಿಲ್ಲಾ.

:ಎರಡನೆಯ ವಿವಾದಾಂಶಕ್ಕೆ ಉತ್ತರ–ಇಲ್ಲಾ:

ಮೊದಲನೆಯ ವಿವಾದಾಂಶದಿಂದ ಪಡೆದ ಉತ್ತರದಲ್ಲಿ ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವದು ಸ್ಪಷ್ಟವಾಗಿ ಸಾಬೀತಾಗಿದ್ದು, ಪ್ರಕರಣವು ಸಂಭವಿಸಿದ ಸಮಯದಲ್ಲಿ ಇವನ ತಿಳುವಳಿಕೆಯಿಂದ ಹಾಗೂ ಇತನ ಶಾಮೀಲಿನಿಂದಲೇ ಸದರಿ ವಾಹನದಲ್ಲಿ ಅಕ್ರಮ ಮದ್ಯಸಾರ ಸಾಗಾಣಿಕೆಯಾಗಿರುವುದು ಸ್ಪಷ್ಟವಾಗಿ ರುಜುವಾತ ಆಗಿದ್ದು ಇದರ ಬಗ್ಗೆ ವಾಹನದ ಮಾಲೀಕನಿಗೂ ಸಹ ತಿಳುವಳಿಕೆ ಇದ್ದಿತೆಂಬುದು ತಿಳಿದು ಬರುತ್ತದೆ. ವಾಹನದ ಮಾಲೀಕನ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುತ್ತದೆ ಎಂಬುದು ಸಂದೇಹಾತೀತವಾಗಿ ರುಜುವಾತುವಾಗಿದೆ. ಇದನ್ನು ಅಲ್ಲಗಳೆಯಲು ಅರ್ಜಿದಾರನು ತನ್ನ ಪರ ಯಾವುದೇ ಸಾಕ್ಷಾಧಾರಗಳನ್ನು ನೀಡಿರುವುದಿಲ್ಲಾ.

ನಿಯಮ 43 (ಬಿ) (2) ರನ್ವಯ ಸ್ವತ: ವಾಹನದ ಮಾಲೀಕ ಅವರ ಪ್ರತಿನಿಧಿ ಮತ್ತು ವಾಹನ ಯಾರ ವಶದಲ್ಲಿತ್ತೋ ಆತನು ವಿವರಗಳು ವಾಹನದಲ್ಲಿ ಮದ್ಯ ಅಥವಾ ಅಮಲಿನ ಪದಾರ್ಥ ಸಾಗಾಣಿಕೆಯಾಗಿರುವುದರ ಬಗ್ಗೆ ತಮ್ಮಗಳ ಗಮನಕ್ಕೆ ಬಾರದೇ ಅಥವಾ ಶಾಮೀಲಾಗದೇ ಈ ಕೃತ್ಯವು ಸಂಭವಿಸಿದೆ. ಮತ್ತು ಇಂತಹ ಉಪಯೋಗದ ವಿರುದ್ಧ ತಾವು ಪ್ರತಿಯೊಬ್ಬರು ಎಲ್ಲ ರೀತಿಯ ಸಕಾರಣವಾದ ಮತ್ತು ಅಗತ್ಯವಾದ ಮಂಜೂರಾತಿಯನ್ನು ತೆಗೆದುಕೊಂಡಿರುವುದರ ಬಗ್ಗೆ ಪ್ರಾಧೀಕೃತ ಅಧಿಕಾರಿಗಳಿಗೆ ತೃಪ್ತಿಕರವಾಗಿ ಸಾಭೀತು ಪಡಿಸಬೇಕಾಗಿರುತ್ತದೆ. ಆದರೆ ಅರ್ಜಿದಾರರು ತಮ್ಮ ಹೇಳಿಕೆಯಿಂದಾಗಲೀ ಅಥವಾ ಸಾಕ್ಷಾಧಾರಗಳಿಂದಾಗಲೀ ನೀಡಿರುವುದರಿಂದಾ ತಮ್ಮ ಹೊಣೆಗಾರಿಕೆಯನ್ನು ಈ ಪ್ರಾಧೀಕಾರಕ್ಕೆ ತೃಪ್ತಿಕರವಾಗಿ ಸಾಭೀತು ಪಡಿಸಿರುವುದಿಲ್ಲಾ.

ಈ ಪ್ರಕರಣದಲ್ಲಿ ವಾಹನದ ಈ ಕೃತ್ಯವು ಪರೋಕ್ಷವಾಗಿ ಅರ್ಜಿದಾರನ ತಿಳುವಳಿಕೆಯಿಂದಲೇ ನಡೆದಿರುವದು ಸ್ಪಷ್ಟವಾಗಿ ತಿಳಿದು ಬರುತ್ತದೆ.

:ಮೂರನೇ ವಿವಾದಾಂಶಕ್ಕೆ ಉತ್ತರ–ಹೌದು:

ಮೂರನೇ ಮತ್ತು ಎರಡನೇಯ ವಿವಾದಾಂಶದಿಂದ ಪಡೆದ ಉತ್ತರದಿಂದ ಪ್ರಕರಣದಲ್ಲಿ ಜಪ್ತು ಮಾಡಲ್ಪಟ್ಟ ವಾಹನವು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿ ಕಂಡು ಬಂದಿರುವುದರಿಂದಾ ಈ ಕೆಳಕಂಡಂತೆ ಆದೇಶ.

ಆದೇಶ

ಎನ್.ಎಂ.ವಜೀರ ಪ್ರಾಧೀಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಬಿಜಾಪೂರ ಜಿಲ್ಲೆ ಬಿಜಾಪೂರ ಆದ ನಾನು, ಕರ್ನಾಟಕ ಅಬಕಾರಿ ಅಧಿನಿಯಮ 1965 ರ ನಿಯಮ 43(ಬಿ) ಅಡಿಯಲ್ಲಿ ಅನುಸರಿಸಬೇಕಾದ ವಿಧಿ ವಿಧಾನಗಳನ್ನು ಅನುಸರಿಸಿದ ನಂತರ ಕಲಂ 43 (ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43 (ಎ) 2 ರನ್ವಯ ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ಉಪ ವಿಭಾಗ ಇವರ ದಿನಾಂಕ : 24–04–2008 ರಂದು ಗುನ್ನಾ ನಂಬರ:18/2007–08 ರಲ್ಲಿ ಜಪ್ತು ಮಾಡಲ್ಪಟ್ಟ ವಾಹನ ನಂಬರ:ಕೆಎ–28–ಎ–345 (ಅಟೋರೀಕ್ಷ) ವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿದ್ದೇನೆ..

ಈ ಆದೇಶವನ್ನು ಇಂದು ದಿನಾಂಕ:22–01–2009 ರಂದು ನನ್ನ ಸಹಿ ಹಾಗೂ ಮುದ್ರೆಯೊಂದಿಗೆ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುವದು.

ಎನ್.ಎಂ.ವಜೀರ
ಅಧೀಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಬಿಜಾಪೂರ ಜಿಲ್ಲೆ, ಬಿಜಾಪೂರ.

ಅನುಬಂಧ (1)

ಫಿರ್ಯಾಧಿದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ ಸಾ–1	ಶ್ರೀಮತಿ ಎಸ್.ಎಂ.ಪಾಟೀಲ ಅಬಕಾರಿ ಉಪ ನಿರೀಕ್ಷಕರು ಬಿಜಾಪರ ಉಪ ವಿಭಾಗ	ಪಿರ್ಯಾಧಿದಾರರು
ಪ್ರಾ ಸಾ–2	ಶ್ರೀ. ಲಕ್ಷ್ಮಣ ರಾಚಪ್ಪ ಕಣಬೂರ ವಯಸ್ಸು–62 ಉ–ಕೂಲಿ, ಸಾ॥ಮದಭಾವಿ, ಹಾಲಿವಸ್ತಿ:ಬಿಜಾಪೂರ	ಪಂಚರು
ಪ್ರಾ ಸಾ–3	ಶ್ರೀ. ವಿಶ್ವನಾಥ.ವೈ.ಎಸ್. ಅಬಕಾರಿ ಉಪ ನಿರೀಕ್ಷಕರು ಬಿಜಾಪೂರ ವಲಯ	ತನಿಖಾಧಿಕಾರಿಗಳು.

ಅನುಬಂಧ–(2)

ಫಿರ್ಯಾಧಿದಾರರ ಪರ ಮಂಡಿಸಲಾದ ದಾಖಲೆಗಳು

ನಿಶಾನೆ–ಪಿ–1	ಪಂಚನಾಮೆ
ನಿಶಾನೆ–ಪಿ–1(ಎ)	ಪ್ರಾ ಸಾ–1 ರವರ ಸಹಿ
ನಿಶಾನೆ–ಪಿ–2	ಪ್ರಥಮ ವರ್ತಮಾನ ವರದಿ
ನಿಶಾನೆ–ಪಿ–2(ಎ)	ಪ್ರಾ ಸಾ–1 ರವರ ಸಹಿ
ನಿಶಾನೆ–ಪಿ–1(ಬಿ)	ಪ್ರಾ.ಸಾ–2 ರವರ ಸಹಿ
ನಿಶಾನೆ–ಪಿ–3	ರಸಾಯನಿಕ ತಜ್ಞರ ವರದಿ
ನಿಶಾನೆ–ಪಿ–4	ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿದ ವಾಹನದ ಬಿ–ಎಕ್ಸ್‌ಟ್ರ್ಯಾಕ್ಟ

ಅನುಬಂಧ–(3)

ಫೀರ್ಯಾಧಿದಾರರ ಪರ ಗುರುತಿಸಲಾದ ವಸ್ತುಗಳು

1) ಎಂ.ಓ.–1 ಮಾದರಿ ಅಟೋರೀಕ್ಷಾ ವಾಹನ ನಂ:ಕೆಎ–28–ಎ–345

ಅನುಬಂಧ–(4)

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು.

ಇಲ್ಲಾ

ಅನುಬಂಧ– (5)

ವಾಹನದ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು

ಇಲ್ಲಾ.

ಎನ್.ಎಂ.ವಜೀರ

ಅಧೀಕೃತ ಅಧಿಕಾರಿಗಳು ಹಾಗೂ

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್

ಬಿಜಾಪೂರ ಜಿಲ್ಲೆ, ಬಿಜಾಪೂರ.

ಪಿ.ಆರ್.140

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪವಿಭಾಗ–4, ಕಾರ್ಮಿಕಭವನ, ಬನ್ನೇರುಘಟ್ಟ ರಸ್ತೆ, ಐ.ಟಿ.ಐ. ಆವರಣ, ಬೆಂಗಳೂರು–560029

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಫ್‌ಸಿ: ಸಿಆರ್–9/2008, ದಿನಾಂಕ:3ನೇ ಫೆಬ್ರವರಿ, 2009

ಅರ್ಜಿದಾರರು:	**ಪ್ರತಿವಾದಿಗಳು:**
1) ಶ್ರೀಮತಿ ಎಲಿಜಬತ್ ಕೋಂ ಲೇಟ್ ಪಿ. ಡೇವಿಡ್, ನಂ.354, ಸಿದ್ದಾರ್ಥ ಕಾಲೇಜ್ ಎದುರು, 7ನೇ ಮೈನ್, 7ನೇ ಬಿ.ಕ್ರಾಸ್, ಲಿಂಗರಾಜಪುರಂ, ಟೌನ್ ಅಂಚೆ, ಬೆಂಗಳೂರು–84.	ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ಪೂರ್ವ ವಿಭಾಗ, ಬೆಸ್ಕಾಂ, ಹೆಚ್‌ಎಎಲ್. 2ನೇ ಹಂತ, ಸೆಂಟ್ ಮಾರ್ತಾಸ್ ಬೆಂಗಳೂರು–38.

ಪ್ರಕಟಣೆ

ಅರ್ಜಿದಾರರಾದ ಶ್ರೀಮತಿ ಎಲಿಜಬತ್ ಇವರುಗಳು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, ದಿವಂಗತ ಪಿ. ಡೇವಿಡ್ ಇವರು ಪ್ರತಿವಾದಿ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಅಪಘಾತ ಹೊಂದಿ ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೆ ತಾವು ಮೃತರ ಅವಲಂಬಿತರಾದ್ದರಿಂದ ತಮಗೆ ಕಾಯ್ದೆಯನ್ವಯ ಪರಿಹಾರದ ಹಣವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನದೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸೋಮಣ್ಣ

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,

ಉಪವಿಭಾಗ–4, ಬೆಂಗಳೂರು.

ಪಿ.ಆರ್.141

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಣನಿಯಂತ್ರಣ ವಿಭಾಗ, ಧಾರವಾಡ

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಭಾರತ ಸರ್ಕಾರ)

ಅಧಿಸೂಚನೆ

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005 ಸೆಕ್ಷನ್-5(1), 5(2) ಹಾಗೂ 519(1)ರ ಪ್ರಕಾರ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರ, ಸಹಾಯಕ ಸಾರ್ವಜನಿಕ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಗಳೆಂದು ನೇಮಿಸಲಾಗಿದೆ.

1.	ಇಲಾಖೆ	ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
2.	ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005 ಸೆಕ್ಷನ್-5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಕಾರ್ಯನಿರ್ವಾಹಕ ಇಂಜನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಕಛೇರಿ, ಧಾರವಾಡ, ದೂ:0836-2741209.
3.	ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005 ಸೆಕ್ಷನ್-5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಸಹಾಯಕ ಇಂಜಿನೀಯರ ಕಾರ್ಯನಿರ್ವಾಹಕ ಇಂಜನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಕಛೇರಿ ಧಾರವಾಡ, ದೂ:0836-2741209.
4.	ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005 ಸೆಕ್ಷನ್-19(1)ರ ಪ್ರಕಾರ ಮೇಲ್ಮನವಿ ಅಧಿಕಾರಿ.	ಅಧೀಕ್ಷಕ ಇಂಜನೀಯರ ಲೋ.ಇ. ಗುಣನಿಯಂತ್ರಣ ವೃತ್ತ ಕಛೇರಿ, ಧಾರವಾಡ ದೂ:0836-2740883.

ಎಂ.ವಿ. ಶೇಜವಾಡಕರ

ಕಾರ್ಯನಿರ್ವಾಹಕ ಇಂಜಿನೀಯರ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಗುಣ ನಿಯಂತ್ರಣ ವಿಭಾಗ, ಧಾರವಾಡ.

ಕಾರ್ಯನಿರ್ವಾಹಕ ಇಂಜಿನೀಯರ ಕಛೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಣ ನಿಯಂತ್ರಣ ವಿಭಾಗ, ಧಾರವಾಡ

ಅಧಿಸೂಚನೆ

ಸಂಖ್ಯೆ: ಅಇಂ:ಗುನಿವಿಧಾ:ಸಿ-1:08-09

ಮಾಹಿತಿ ಹಕ್ಕು ಅಧಿನಿಯಮ 2005ರ (ಕೇಂದ್ರ ಕಾಯ್ದೆ 2005ರ ಸಂಖ್ಯೆಯ) ಪರಿಚ್ಛೇದ 5(1) ಹಾಗೂ 19(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕಾರ್ಯನಿರ್ವಾಹಕ ಇಂಜನೀಯರ ಕಛೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಗುಣ ನಿಯಂತ್ರಣ ವಿಭಾಗ, ಧಾರವಾಡ ಇವರ ಕಛೇರಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಪ್ರಾಧಿಕಾರಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಗೊತ್ತುಪಡಿಸಲಾಗಿದೆ.

ಕ್ರ. ಸಂ.	ಸಾರ್ವಜನಿಕ ಪ್ರಾಧಿಕಾರ	ಇಲಾಖೆ	ಸಾರ್ವಜನಿಕ ಮಾಹಿತಿ ಅಧಿಕಾರಿ	ಸಹಾಯಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರ
1	2	3	4	5	6
1.	ಕಾರ್ಯನಿರ್ವಾಹಕ ಇಂಜನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಕಛೇರಿ, ಧಾರವಾಡ ದೂ:0836-2741209	ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.	ಕಾರ್ಯನಿರ್ವಾಹಕ ಇಂಜನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಕಛೇರಿ, ಧಾರವಾಡ ದೂ:0836-2741209	ಸಹಾಯಕ ಇಂಜಿನೀಯರ ಕಾರ್ಯನಿರ್ವಾಹಕ ಇಂಜನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಕಛೇರಿ, ಧಾರವಾಡ ದೂ:0836-2741209	ಅಧೀಕ್ಷಕ ಇಂಜಿನೀಯರ ಲೋ.ಇ. ಗುಣನಿಯಂತ್ರಣ ವೃತ್ತ ಕಛೇರಿ, ಧಾರವಾಡ ದೂ:0836-2740883

ಎಂ.ವಿ. ಶೇಜವಾಡಕರ

ಕಾರ್ಯನಿರ್ವಾಹಕ ಇಂಜಿನೀಯರ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಗುಣ ನಿಯಂತ್ರಣ ವಿಭಾಗ, ಧಾರವಾಡ.

ಅರೆ ಖಾಯಂ ಮಾಹಿತಿ

ಖಾಯಂ ಮಾಹಿತಿ
ಕೈಪಿಡಿ 1 ರಿಂದ 6
ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಭಾರತ ಸರ್ಕಾರ)
ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಗುಣನಿಯಂತ್ರಣ ವಿಭಾಗ, ಧಾರವಾಡ

ಕೈಪಿಡಿ–1 ಸಂಸ್ಥೆಯ ವಿವರಗಳು ಮತ್ತು ಕರ್ತವ್ಯ ಮತ್ತು ವಿಧಿಗಳು

ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳು, ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳ ಮೇಲಿನ ಗುಣನಿಯಂತ್ರಣದ ಕಾರ್ಯವನ್ನು ಪರಿವೀಕ್ಷಣೆ ನಿರ್ವಹಿಸಲು, ಲೋ.ಇ. ಗುಣನಿಯಂತ್ರಣ ವಿಭಾಗ ಧಾರವಾಡ ಎಂಬ ಕಛೇರಿಯು ದಿನಾಂಕ:04.12.1999 ರಂದು ಹೊಸದಾಗಿ ಪ್ರಾರಂಭಗೊಂಡಿದ್ದು, ಈ ವಿಭಾಗದ ವ್ಯಾಪ್ತಿಯಲ್ಲಿ ಧಾರವಾಡ ಮತ್ತು ಬೆಳಗಾವಿ ಉಪವಿಭಾಗಗಳು ನಿರ್ವಹಿಸುತ್ತಿದ್ದು, ಪ್ರತಿಯೊಂದು ಉಪವಿಭಾಗದಲ್ಲಿ ಬರುವ ಸಿಬ್ಬಂದಿ ಹಾಗೂ ತಾಂತ್ರಿಕ ಕೆಲಸಗಳಿಗೆ ಕಾರ್ಯನಿರ್ವಾಹಕ ಇಂಜಿನೀಯರರವರು ಮೇಲ್ವಿಚಾರಕರಾಗಿರುತ್ತಾರೆ ಇಲಾಖೆಯ ಕೆಲಸಗಳಿಗೆ ದಕ್ಷತೆಯಿಂದ ನಿರ್ವಹಿಸಲು ಉಪವಿಭಾಗವಾರು ಹೊಣೆ ಹೊತ್ತಿರುತ್ತಾರೆ.

ಈ ವಿಭಾಗದ ಅಡಿಯಲ್ಲಿ ಧಾರವಾಡ, ಗದಗ, ಹಾವೇರಿ, ಕಾರವಾರ, ಬೆಳಗಾವಿ, ಬಿಜಾಪುರ ಮತ್ತು ಬಾಗಲಕೋಟೆ, ಜಿಲ್ಲೆಗಳು ಬರುತ್ತವೆ. ಈ ಏಳು ಜಿಲ್ಲೆಗಳಿಗೆ ಸಂಬಂಧಿಸಿದ ಕಾಮಗಾರಿಗಳ ಗುಣನಿಯಂತ್ರಣ ಪರೀಕ್ಷೆಗಳ ಉಸ್ತುವಾರಿ ಹಾಗೂ ಕಾಮಗಾರಿಗಳ ಪರಿವೀಕ್ಷಣೆಯನ್ನು ಕೈಗೊಳ್ಳುವುದು.

ಗುಣನಿಯಂತ್ರಣ ವಿಭಾಗ ಕಛೇರಿ, ಧಾರವಾಡ

ಕ್ರ.ಸಂ.	ಲೋ.ಇ. ವಿಭಾಗಗಳು	ವಿಭಾಗ ಕಾರ್ಯವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳು
1.	ಧಾರವಾಡ	ಧಾರವಾಡ ಜಿಲ್ಲೆ
2.	ಗದಗ	ಗದಗ ಜಿಲ್ಲೆ
3.	ಹಾವೇರಿ	ಹಾವೇರಿ ಜಿಲ್ಲೆ
4.	ಕಾರವಾರ	ಕಾರವಾರ ಜಿಲ್ಲೆ
5.	ಶಿರಸಿ	ಕಾರವಾರ ಜಿಲ್ಲೆ
6.	ಬೆಳಗಾವಿ	ಬೆಳಗಾವಿ ಜಿಲ್ಲೆ
7.	ಚಿಕ್ಕೋಡಿ	ಬೆಳಗಾವಿ ಜಿಲ್ಲೆ
8.	ಬಿಜಾಪುರ	ಬಿಜಾಪುರ ಜಿಲ್ಲೆ
9.	ಬಾಗಲಕೋಟೆ	ಬಾಗಲಕೋಟೆ ಜಿಲ್ಲೆ

ಗುಣನಿಯಂತ್ರಣ ವಿಭಾಗ ಕಛೇರಿ ಧಾರವಾಡ ಇವರ ಅಡಿಯಲ್ಲಿನ ಎರಡು ಉಪವಿಭಾಗಗಳಿದ್ದು, ಅವುಗಳ ಕಾರ್ಯಕ್ಷೇತ್ರದ ವಿವರಗಳು ಈ ಕೆಳಗಿನಂತಿವೆ.

1.	ಧಾರವಾಡ	ಧಾರವಾಡ ಜಿಲ್ಲೆ
		ಗದಗ ಜಿಲ್ಲೆ
		ಹಾವೇರಿ ಜಿಲ್ಲೆ
		ಕಾರವಾರ ಜಿಲ್ಲೆ
2	ಬೆಳಗಾವಿ	ಬೆಳಗಾವಿ ಜಿಲ್ಲೆ
		ಬಿಜಾಪುರ ಜಿಲ್ಲೆ
		ಬಾಗಲಕೋಟೆ ಜಿಲ್ಲೆ

ಕಾರ್ಯನಿರ್ವಾಹಕ ಇಂಜಿನೀಯರವರು ಲೋ.ಇ. ಗುಣನಿಯಂತ್ರಣ ವಿಭಾಗದ ಮುಖ್ಯಸ್ಥರಾಗಿರುತ್ತಾರೆ ಇವರ ಅಧೀನದಲ್ಲಿ ಮುಖ್ಯವಾಗಿ ಎರಡು ಶಾಖೆಗಳು ಕಾರ್ಯನಿರ್ವಹಿಸುತ್ತವೆ.

1. ತಾಂತ್ರಿಕ ಶಾಖೆ
2. ಆಡಳಿತ ಶಾಖೆ

1. ಆಡಳಿತ ಶಾಖೆ:

ಕಾರ್ಯನಿರ್ವಾಹಕ ಇಂಜಿನೀಯರವರು ನಿಯಂತ್ರಣಾಧಿಕಾರಿಗಳಾಗಿದ್ದು, ಮಂಜೂರಿರುವ 39 ಹುದ್ದೆಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಇದರಲ್ಲಿ 3 'ಎ' ವರ್ಗದ ಅಧಿಕಾರಿಗಳು, 4 'ಬಿ' ವರ್ಗ 15 'ಸಿ' ವರ್ಗ ಹಾಗೂ 4 'ಡಿ' ವರ್ಗ ಸಂಖ್ಯೆಗಳಾಗಿರುತ್ತದೆ.

ಕಾರ್ಯನಿರ್ವಾಹಕ ಇಂಜಿನೀಯರವರು ಲೋ.ಇ. ಗುಣನಿಯಂತ್ರಣ ಧಾರವಾಡ ವಿಭಾಗಕ್ಕೆ ಒಟ್ಟು 39 ಹುದ್ದೆಗಳು ಮಂಜೂರಾಗಿದ್ದು ಇದರ ಪೈಕಿ 4 'ಬಿ' ವರ್ಗ 9 'ಸಿ' ವರ್ಗದ ಹುದ್ದೆಗಳು ಖಾಲಿ ಇರುತ್ತವೆ.

ಅ) ಸಹಾಯಕ ಇಂಜಿನೀಯರ 4–ಹುದ್ದೆಗಳು ಖಾಲಿ ಇರುತ್ತವೆ.

ಆ) ಕಿರಿಯ ಇಂಜಿನೀಯರ 6– ಹುದ್ದೆಗಳು ಖಾಲಿ ಇರುತ್ತವೆ.

ಇ) ಕಂಪ್ಯೂಟರ್ ಆಪರೇಟರ್ 3– ಹುದ್ದೆಗಳು ಖಾಲಿ ಇರುತ್ತವೆ.

ಈ) ಪ್ರ.ದ.ಸ. 'ಎ' ಮತ್ತು 'ಬಿ' ವರ್ಗದ ಅಧಿಕಾರಿಗಳಿಗೆ ಸಂಬಂಧಪಟ್ಟ ಪತ್ರ ವ್ಯವಹಾರ

ಉ) ಪ್ರದಲೆಸ–ಲೆಕ್ಕಪತ್ರ ಶಾಖೆಗೆ ಸಂಬಂಧಿಸಿದ ಪತ್ರ ವ್ಯವಹಾರ

ಊ) ದ್ವಿ.ದ.ಸ.–1

ವೇತನ ಬಿಲ್ಲು ತಯಾರಿಸುವುದು ಕಛೇರಿ ಪತ್ರ ವ್ಯವಹಾರ 'ಸಿ' ವರ್ಗದ ಸಿಬ್ಬಂದಿಯವರಿಗೆ ಸಂಬಂಧಪಟ್ಟ ಪತ್ರ ವ್ಯವಹಾರ.

ಋ) ದ್ವಿ.ದ.ಸ–2

ರವಾನೆ ಮತ್ತು ಸ್ವೀಕೃತಿ ವಿಭಾಗ, 'ಡಿ' ವರ್ಗದ ಸಿಬ್ಬಂದಿಯವರಿಗೆ ಸಂಬಂಧಪಟ್ಟ ಪತ್ರ ವ್ಯವಹಾರ.

2) ತಾಂತ್ರಿಕ ಶಾಖೆ

ಇಬ್ಬರು ಸಹಾಯಕ ಇಂಜಿನೀಯರ ಮತ್ತು ಒಬ್ಬ ಕಿರಿಯ ಇಂಜಿನೀಯರ ಇದ್ದು ತಾಂತ್ರಿಕ ಶಾಖೆಗೆ ಸಂಬಂಧಿಸಿದ ಪರಿವೀಕ್ಷಣಾ ವರದಿ, ಎಂ.ಎಂ.ಆರ್. ಸಭೆಗೆ ಅನುಕೂಲ ಮಾಡಿಕೊಡುವುದು. ಪಾಲನಾ ವರದಿ ಪರಿಶೀಲಿಸಿ ಕಾರ್ಯನಿರ್ವಾಹಕ ಇಂಜಿನೀಯರವರಿಗೆ ಮಂಡಿಸುವುದು. ವಾಹನಗಳಿಗೆ ಆಯವ್ಯಯ ತಯಾರಿಸುವುದು ಪತ್ರ ವ್ಯವಹಾರ ಇತರೆ ಗುಣನಿಯಂತ್ರಣ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಇಂಜಿನೀಯರರವರಿಗೆ ಸಹಾಯಕರಾಗಿರುವುದು.

ಕೈಪಿಡಿ–2

ಸಂಸ್ಥೆಯ ಅಧಿಕಾರ, ಸಿಬ್ಬಂದಿ ವರ್ಗದ ಅಧಿಕಾರ ಮತ್ತು ವಿಧಿಗಳ ವಿವರ

ಅ) ಕಾರ್ಯನಿರ್ವಾಹಕ ಇಂಜಿನೀಯರರ ಕಾರ್ಯಭಾರ:

ಕಾರ್ಯನಿರ್ವಾಹಕ ಇಂಜಿನೀಯರರವರು ಉಪವಿಭಾಗಗಳಿಗೆ ಸಂಬಂಧಿಸಿದ ಗುಣಮಟ್ಟದ ಪರೀಕ್ಷಾ ವರದಿಯನ್ನು ಪರಿಶೀಲಿಸುವುದು ಸಂಬಂಧಿಸಿದ ಕಾಮಗಾರಿಗಳ ಪರಿವೀಕ್ಷಣೆ, ಉಪವಿಭಾಗಗಳಿಂದ ಸ್ವೀಕರಿಸಿದ ಬಿಲ್ಲುಗಳಿಗೆ ವಿಭಾಗ ಮಟ್ಟದಲ್ಲಿ ಪಾವತಿಸುವುದು, ಲೆಕ್ಕ ಪತ್ರ ಶಾಖೆಯ ನಿರ್ವಹಣೆ, ಇತರೆ ವಿಭಾಗ ಮಟ್ಟದ ಕಾರ್ಯಗಳ ಮೇಲ್ವಿಚಾರಣೆ.

ಆ) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರುಗಳ ಕಾರ್ಯಭಾರ:

ತಮ್ಮ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರಯೋಗಶಾಲೆಗೆ ಬಂದ ಸಾಮಗ್ರಿಗಳ ಪರೀಕ್ಷೆ ನಡೆಸುವುದು, ಬಿಲ್ಲುಗಳ ನಿರ್ವಹಣೆ, ಪ್ರತಿ ತಿಂಗಳು, ವಿಭಾಗ, ವೃತ್ತ ಮಟ್ಟದ ಸಭೆಗೆ ಪ್ರಗತಿ ಪರಿಶೀಲನೆಗಾಗಿ ಹಾಜರಾಗುವುದು.

ಕೈಪಿಡಿ–3

ನಿರ್ಣಯ ತೆಗೆದುಕೊಳ್ಳುವಲ್ಲಿ ಪಾಲಿಸಬೇಕಾದ ವಿಧಿವಿಧಾನಗಳು, ಪರಿವೀಕ್ಷಣೆ ಮತ್ತು ಜವಾಬ್ದಾರಿ ವಿವರಗಳು.

ಇಲಾಖೆಯ ಕಾಮಗಾರಿಗೆ ಸಂಬಂಧಪಟ್ಟ ಕಾರ್ಯನಿರ್ವಹಣೆ

1) ಲೋಕೋಪಯೋಗಿ ಇಲಾಖೆಯ ಸಂಹಿತೆ ಭಾಗ–1 ಮತ್ತು ಭಾಗ–2

2) ಕರ್ನಾಟಕ ಪಾರದರ್ಶಕ ನಿಯಮ

3) ಲೋಕೋಪಯೋಗಿ ಇಲಾಖೆಯ ಲೆಕ್ಕ ಸಂಹಿತೆ ಭಾಗ–1 ಮತ್ತು ಭಾಗ–2

4) ಉಗ್ರಾಣ ಕೈಪಿಡಿ

ಆಡಳಿತವನ್ನು ನಿರ್ವಹಿಸಲು

1) ಕರ್ನಾಟಕ ನಾಗರೀಕ ಸೇವಾ ನಿಯಮ

2) ಕರ್ನಾಟಕ ಆರ್ಥಿಕ ಸಂಹಿತೆ

3) ಕರ್ನಾಟಕ ಖಜಾನೆ ಸಂಹಿತೆ

4) ಕರ್ನಾಟಕ ನಾಗರೀಕ ಸೇವೆ (ನಡೆತೆ) ನಿಯಮ

ಇವುಗಳನ್ನು ಅನುಸರಿಸಲಾಗುತ್ತಿದೆ.

ಈ ಕಛೇರಿಯು ಕಾಮಗಾರಿ ಗುಣಮಟ್ಟದ ಬಗ್ಗೆ ಪರಿವೀಕ್ಷಣೆ ಮಾತ್ರ ನಿರ್ವಹಿಸುತ್ತಿದ್ದು, ಪ್ರತಿ ತಿಂಗಳು ಮಾಸಿಕ ಸಭೆಯಲ್ಲಿ ಪ್ರಗತಿ ಪರಿಶೀಲನೆ ನಿರ್ವಹಿಸುವುದು.

ಕೈಪಿಡಿ–4

ಕರ್ತವ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ಸೂತ್ರಗಳು

1) ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ:

(ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯೂ:1: ಉಪ:ಸಿ:ಆರ್:93 ದಿನಾಂಕ:15.12.1994)

2) ಸಾಮಾನ್ಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ:

(ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ:1: ಟಿ.ಎಫ್.ಎ:2001 ದಿನಾಂಕ:02.02.2001)

3) ಲೋಕೋಪಯೋಗಿ ಇಲಾಖೆ ಸಂಹಿತೆ

4) ಲೋಕೋಪಯೋಗಿ ಆರ್ಥಿಕ ಸಂಹಿತೆ

ಕೈಪಿಡಿ–5

ಕಛೇರಿ ಕೈಪಿಡಿ, ನಿಯಮಗಳು ಮತ್ತು ಸೂಚನೆಗಳು

- ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು
- ಕರ್ನಾಟಕ ಸರ್ಕಾರಿ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು
- ಕರ್ನಾಟಕ ಆರ್ಥಿಕ ಸಂಹಿತೆ
- ಲೋಕೋಪಯೋಗಿ ಇಲಾಖೆಯ ಸಂಹಿತೆ ಭಾಗ–1 ಮತ್ತು ಭಾಗ–2
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ–2000
- ಲೋಕೋಪಯೋಗಿ ಇಲಾಖೆಯ ಲೆಕ್ಕ ಸಂಹಿತೆ ಭಾಗ–1 ಮತ್ತು ಭಾಗ–2ನ್ನು ಅನುಸರಿಸಲಾಗುವುದು
- ಭೂಸ್ವಾಧೀನ ಕಾಯ್ದೆ
- ಉಗ್ರಾಣ ಕೈಪಿಡಿ
- ಐಎಸ್ ಕೋಡ್ಸ್
- ಸಾದಿಲ್ವಾರು ವೆಚ್ಚದ ಕೈಪಿಡಿ
- ಕರ್ನಾಟಕ ಖಜಾನೆ ಸಂಹಿತೆ
- ಚಾಲ್ತಿ ದರಪಟ್ಟಿ
- ಬಜೆಟ್ ಕೈಪಿಡಿ
- ಹೆದ್ದಾರಿ ಕಾಯ್ದೆ 1964ರ ನಿಯಮಗಳು

ದಾಖಲೆಗಳು

ತಾಂತ್ರಿಕ ಶಾಖೆ:

1. ಕಾಮಗಾರಿಗಳ ಪರಿವೀಕ್ಷಣಾ ವರದಿ
2. ಪಾಲನಾ ವರದಿ ಮತ್ತು ಸಲಹೆಗಳು

ಆಡಳಿತ ಶಾಖೆ

- ನಿಯತಕಾಲಿಕ ವಹಿ
- ವಿಷಯ ವಹಿ
- ಶುದ್ಧ ಪ್ರತಿಯ ವಹಿ
- ರವಾನೆ ವಹಿ

- ❖ ಸ್ಥಳೀಯ ಬಟವಾಡೆ ಪುಸ್ತಕ
- ❖ ದಾಖಲು ನೀಡಿಕೆ ವಹಿ
- ❖ ಆಕಸ್ಮಿಕ ರಜಾ ವಹಿ
- ❖ ಗ್ರಂಥಾಲಯ ಪುಸ್ತಕ ನೀಡಿಕೆ ವಹಿ
- ❖ ವೈಯಕ್ತಿಕ ವಹಿ
- ❖ ದಿನಚರಿ ವಹಿ
- ❖ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ವಹಿ
- ❖ ನೌಕರರ ಸೇವಾ ವಹಿ
- ❖ ಇನ್‌ಕಂಬೆನ್ಸಿ ವಹಿ
- ❖ ಕಾರ್ಯನಿರ್ವಹಣಾ (ರಹಸ್ಯ) ವರದಿಗಳ ದಾಖಲು ವಹಿ
- ❖ ನಿವೃತ್ತಿ ವೇತನ ನಿಗಾ ವಹಿ
- ❖ ದೂರವಾಣಿ ಟ್ರಂಕಾಲ್ ವಹಿ
- ❖ ತಪಾಸಣೆಗಳ ಚಲನವಲನ ವಹಿ
- ❖ ನಿಯತಕಾಲಿಗಳ ನಿಗಾ ವಹಿ
- ❖ ನೌಕರರ ಮನೆ ವಿಳಾಸ ಮಾಹಿತಿ ವಹಿ
- ❖ ಮಾಹಿತಿ ಹಕ್ಕು ಅಧಿನಿಯಮ ಪತ್ರವ್ಯವಹಾರ

ಕೈಪಿಡಿ–6

ಇಲಾಖೆಯ ಅಧೀನದಲ್ಲಿ ಬರುವ ದಾಖಲೆಗಳ ವರ್ಗೀಕರಣ

ಆಡಳಿತ ಶಾಖೆ

- ❖ ಸಾಮಾನ್ಯ ಸ್ವೀಕೃತಿ ವಹಿ
- ❖ ಸ್ಟ್ಯಾಂಪು ವಹಿ
- ❖ ಹಾಜರಿ ಪುಸ್ತಕ
- ❖ ದಾಖಲು ವಹಿ
- ❖ ಪೀಠೋಪಕರಣಗಳು ಮತ್ತು ಇತರ ಸಾಮಗ್ರಿಗಳ ವಹಿ
- ❖ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕಳುಹಿಸುವ ಚಲನವಲನ ವಹಿ
- ❖ ಗೃಹ ನಿರ್ಮಾಣ ಮುಂಗಡ, ವಾಹನ ಮುಂಗಡ ಚಲನವಲನ ವಹಿ
- ❖ ಕಛೇರಿ ಆದೇಶ ವಹಿ
- ❖ ಶಿಸ್ತು ಪ್ರಕರಣ ನಿಗಾ ವಹಿ

ಅರೆಖಾಯಂ ಮಾಹಿತಿ

ಕೈಪಿಡಿ 7 ರಿಂದ 17

ಕೈಪಿಡಿ–7

ಇಲಾಖೆಯಲ್ಲಿ ನೀತಿ ನಿಯಮಗಳನ್ನು ಅಥವಾ ಆಡಳಿತವನ್ನು ನಡೆಸುವಲ್ಲಿ ಪಡೆಯುವ ಸಲಹಾ ಸೂತ್ರಗಳ ಅಥವಾ ಸಾರ್ವಜನಿಕ ಸದಸ್ಯರುಗಳಿಂದ ಸಲಹೆ ಪಡೆಯುವ ಬಗ್ಗೆ ಇರುವ ವ್ಯವಸ್ಥೆ ಮತ್ತು ವಿವರ.

ಏನೂ ಇರುವುದಿಲ್ಲ.

ಕೈಪಿಡಿ–8

ಇಲಾಖೆಯಲ್ಲಿರುವ ನಿಗಮ: ಪರಿಷತ್ತು: ಸಮಿತಿ ಮತ್ತು ಇತರ ಸಂಸ್ಥೆಗಳ ವಿವರ ಮತ್ತು ಅದರ ಉದ್ದೇಶ ಮತ್ತು ಈ ಸಂಸ್ಥೆಗಳ ಸಭೆಗಳು ಮತ್ತು ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ.

ಏನು ಇರುವುದಿಲ್ಲ.

ಕೈಪಿಡಿ–9

ಇಲಾಖೆಯ ಅಧಿಕಾರ ಮತ್ತು ಸಿಬ್ಬಂದಿ ವರ್ಗದ ನಿರ್ದೇಶಿಕೆ

ಕಾರ್ಯನಿರ್ವಾಹಕ ಇಂಜಿನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಧಾರವಾಡ ಇವರ ಅಧಿಕಾರದ ಬಗ್ಗೆ ಕೈಪಿಡಿ–2 ರಲ್ಲಿ ವಿವರಿಸಲಾಗಿದೆ.

ಸಿಬ್ಬಂದಿ ವರ್ಗದ ನಿರ್ದೇಶಿಕೆ (ಸಂಘಟನಾ ನಕ್ಷೆ) ಈ ಕೆಳಗಿನಂತಿದೆ.

ಕ್ರ. ಸಂ.	ಹುದ್ದೆ ಮತ್ತು ಹೆಸರು
1.	ಕಾರ್ಯನಿರ್ವಾಹಕ ಇಂಜಿನೀಯರ: ಶ್ರೀ ಎಂ.ವಿ. ಶೇಜವಾಡಕರ
2.	ಸಹಾಯಕ ಇಂಜಿನೀಯರ: 1. ಶ್ರೀ ಆರ್.ಜಿ. ವಂಟಮುತ್ತೆ 2. ಶ್ರೀ ಎಂ.ಎಸ್. ನಾಯಕ
3.	ಕಿರಿಯ ಇಂಜಿನೀಯರ: ಶ್ರೀ ಎ.ಆರ್. ಮಾಡಲಗೇರಿ
4.	–ಸದರಿ– – ಖಾಲಿ –
5.	–ಸದರಿ– – ಖಾಲಿ–
6.	ಪ್ರ.ದ.ಸ. ಶ್ರೀ ಆರ್.ಎಸ್. ಹರಿಹರ
7.	ಪ್ರ.ದ.ಲೆ.ಸ. ಶ್ರೀ ಆರ್.ಎಸ್. ಅಣ್ಣಿಗೇರಿ
8.	ದ್ವಿ.ದ.ಸ. ಶ್ರೀ ಡಿ.ಎಚ್. ಗಾಯಕವಾಡ
9.	ದ್ವಿ.ದ.ಸ. ಶ್ರೀ ಜಿ.ವಿ. ಸುತಾರ
10.	ಕಂಪ್ಯೂಟರ್ ಆಪರೇಟರ್ – ಖಾಲಿ –
11.	ಬೆರಳಚ್ಚುಗಾರ್ತಿ ಶ್ರೀಮತಿ ನಂದಾ ದೇಶಪಾಂಡೆ
12.	ಜವಾನ ಶ್ರೀ ಟಿ.ಎನ್. ಹೊಸೂರ
13.	ಜವಾನ ಶ್ರೀಮತಿ ಜೆ.ಸಿ. ಟೆಲಿಸ್

ಕೈಪಿಡಿ–10

ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ತಿಂಗಳ ವೇತನ: ಪ್ರತಿಫಲ ಮತ್ತು ಅನುದಾನ ನೀಡುವ ಸೂತ್ರಗಳು.

ವೇತನವನ್ನು ಕರ್ನಾಟಕ ಸರ್ಕಾರದ ಸಂಚಿತ ನಿಧಿಯಿಂದ ಪಾವತಿಸಲಾಗುತ್ತಿದೆ.

ಕ್ರ.ಸಂ.	ಹುದ್ದೆ ಮತ್ತು ಹೆಸರು	ವೇತನ ಶ್ರೇಣಿ	ಮೂಲ ವೇತನ
1.	ಕಾರ್ಯನಿರ್ವಾಹಕ ಇಂಜಿನೀಯರ ಶ್ರೀ ಎಂ.ವಿ. ಶೇಜವಾಡಕರ	18150–26925	25050.00
2.	ಸಹಾಯಕ ಇಂಜಿನೀಯರ 1) ಶ್ರೀ ಆರ್.ಜಿ. ವಂಟಮುತ್ತೆ 2) ಶ್ರೀ ಎಂ.ಎಸ್. ನಾಯಕ	14050–25050	20550.00
3.	ಕಿರಿಯ ಇಂಜಿನೀಯರ 1) ಶ್ರೀ ಎ.ಆರ್. ಮಾಡಲಗೇರಿ 2) – ಖಾಲಿ – 3) – ಖಾಲಿ –	8825–16000	10800.00
4.	ಪ್ರ.ದ.ಸ. ಶ್ರೀ ಆರ್.ಎಸ್. ಹರಿಹರ	8825–16000	12000–00
5.	ಪ್ರ.ದ.ಲೆ.ಸ. ಶ್ರೀ ಆರ್.ಎಸ್. ಅಣ್ಣಿಗೇರಿ	7275–13350	9050.00
6.	ದ್ವಿ.ದ.ಸ. 1) ಶ್ರೀ ಡಿ.ಎಚ್. ಗಾಯಕವಾಡ 2) ಶ್ರೀ ಜಿ.ವಿ. ಸುತಾರ	7275–13350 5800–10500	9050.00 7625–00

ಕ್ರ.ಸಂ.	ಹುದ್ದೆ ಮತ್ತು ಹೆಸರು		ವೇತನ ಶ್ರೇಣಿ	ಮೂಲ ವೇತನ
7.	ಕಂಪ್ಯೂಟರ್ ಆಪರೇಟರ್ – ಖಾಲಿ –			
8.	ಬೆರಳಚ್ಚುಗಾರ್ತಿ	ಶ್ರೀಮತಿ ನಂದಾ ದೇಶಪಾಂಡೆ	7275–13350	9050.00
9.	ಜವಾನ	ಶ್ರೀ ಟಿ.ಎನ್. ಹೊಸೂರ ಶ್ರೀಮತಿ ಜೆ.ಸಿ. ಟೆಲಿಸ್	5200–8200 5500–9500	6250–00 7625–00

ಕೈಪಿಡಿ–11

ಇಲಾಖೆಯಲ್ಲಿರುವ ವಿಭಾಗಕ್ಕೆ ನೀಡುತ್ತಿರುವ ಆಯವ್ಯಯದ ವಿವರಗಳು

2007–08ನೇ ಸಾಲಿನ ಅನುದಾನ ಮತ್ತು ವೆಚ್ಚ ತೋರಿಸುವ ತಖ್ತೆ:

ಕ್ರ.ಸಂ.	ಲೆಕ್ಕ ಶೀರ್ಷಿಕೆ	2007–08		ಷರಾ
		ಅನುದಾನ	ವೆಚ್ಚ	
1.	2059–80–053–4–00–200	16.00 (ಲಕ್ಷ)	12.22	

ಕೈಪಿಡಿ–12

ಇಲಾಖೆಯಲ್ಲಿ ಸಹಾಯಧನ ನೀಡುವ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಮತ್ತು ಫಲಾನುಭವಿಗಳ ವಿವರಗಳು

ಸಹಾಯಧನ ನೀಡುವ ಕಾರ್ಯಕ್ರಮ ಇರುವುದಿಲ್ಲ.

ಕೈಪಿಡಿ–13

ಇಲಾಖೆಯಲ್ಲಿ ನೀಡುತ್ತಿರುವ ಪರ್ಮಿಟ್ ಅಥವಾ ಅಧಿಕಾರ ಪತ್ರಗಳ ವಿವರ ಮತ್ತು ರಿಯಾಯಿತಿ ಪಡೆಯುವವರ ವಿವರ

ಯಾವುದೇ ಪ್ರಕ್ರಿಯೆ ಇರುವುದಿಲ್ಲ.

ಕೈಪಿಡಿ–14

ಇಲಾಖೆಯಲ್ಲಿರುವ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ನೀಡಿರುವ ಬಗ್ಗೆ ವಿವರ

ಇಲಾಖೆಯಲ್ಲಿ ಸೈಟ್ ಯಾವುದೂ ಇಲ್ಲಾ

ಆದರೆ ಈ ಮೇಲೆ ಮುಖಾಂತರ ಮಾಹಿತಿಯನ್ನು ಪಡೆಯಲು ಅರ್ಜಿ ಸಲ್ಲಿಸಬಹುದು ವಿವರ ಈ ಕೆಳಗಿನಂತಿದೆ.

eedwdqc@kpwd.gov.in

ಕೈಪಿಡಿ–15

ಇಲಾಖೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಲಭ್ಯವಿರುವ ಸವಲತ್ತುಗಳು ಹಾಗೂ ಗ್ರಂಥಾಲಯ ಅಥವಾ ವಾಚನಾಲಯಗಳು ಇದ್ದಲ್ಲಿ ಅದರ ವಿವರ

ಸಾರ್ವಜನಿಕ ಬಳಕೆಗೆ ಗ್ರಂಥಾಲಯ ಅಥವಾ ವಾಚನಾಲಯ ಲಭ್ಯವಿರುವುದಿಲ್ಲ.

ಕೈಪಿಡಿ–16

ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪದನಾಮ ಮತ್ತು ಇತರೆ ವಿವರಗಳು

ಕ್ರ. ಸಂ.	ಸಾರ್ವಜನಿಕ ಮಾಹಿತಿ ನೀಡುವ ಅಧಿಕಾರಿಗಳು	ಮೇಲ್ಮನವಿ ಅಧಿಕಾರಿಗಳು
1.	ಕಾರ್ಯನಿರ್ವಾಹಕ ಇಂಜಿನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಕಛೇರಿ, ಧಾರವಾಡ ದೂ:0836–2741209	ಅಧೀಕ್ಷಕ ಇಂಜಿನೀಯರ ಲೋ.ಇ. ಗುಣನಿಯಂತ್ರಣ ವೃತ್ತ ಕಛೇರಿ, ಧಾರವಾಡ ದೂ:0836–2740883
2.	ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ಲೋ.ಇ. ಗುಣನಿಯಂತ್ರಣ ಉಪವಿಭಾಗ ಕಛೇರಿ ಧಾರವಾಡ ದೂ:0836–2444537	ಕಾರ್ಯನಿರ್ವಾಹಕ ಇಂಜಿನೀಯರ ಲೋ.ಇ. ಗುಣನಿಯಂತ್ರಣ ವಿಭಾಗ ಕಛೇರಿ, ಧಾರವಾಡ ದೂ:0836–2741209.

ಕೈಪಿಡಿ–17

ಇತರೆ ವಿವರಗಳು

ಏನು ಇರುವುದಿಲ್ಲ.

ಎಂ.ವಿ. ಶೇಜವಾಡಕರ
ಕಾರ್ಯನಿರ್ವಾಹಕ ಇಂಜಿನೀಯರ ಲೋಕೋಪಯೋಗಿ
ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಗುಣನಿಯಂತ್ರಣ ವಿಭಾಗ, ಧಾರವಾಡ.

ಪಿ.ಆರ್.119

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೊಪ್ಪಳ ಜಿಲ್ಲೆ, ಕೊಪ್ಪಳ

ಪ್ರಕಟಣೆ ಕಾಅಕೊ/ ಕಾನಪ/ ಮ.ಪ್ರ/ ಸಂಖ್ಯೆ–60, 2008, ದಿನಾಂಕ:1ನೇ ಜುಲೈ, 2008

ಅರ್ಜಿದಾರರು

1) ಚಂದ್ರಪ್ಪ ತಂದೆ: ಮುರುಗಪ್ಪ ಹಾದಿಮನಿ
2) ಶ್ರೀಮತಿ ನಿಂಗಮ್ಮ ಗಂಡ ಚಂದ್ರಪ್ಪ ಹಾದಿಮನಿ

ಪ್ರತಿವಾದಿಗಳು

1) ಸತೀಶ್ ರಾಜಪೂತ್ ಕೆಎ:35:9961 ವಾಹನದ ಮಾಲೀಕರು, ಹೊಸಪೇಟ್.
2) ಮೆ: ಐ.ಸಿ.ಐ.ಸಿ.ಐ. ಲೋಂಬರ್ಡ್, ಮೋಟಾರು ಇನ್ಸೂರೆನ್ಸ್, ಹುಬ್ಬಳ್ಳಿ.

ಸಾರ್ವಜನಿಕರಿಗೆ ಮತ್ತು ಸಂಬಂಧ ಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ: ಶ್ರೀ/ಶ್ರೀಮತಿ ಶಾಂತಪ್ಪ ತಂದೆ ಚಂದ್ರಪ್ಪ ಹಾದಿಮನಿ ಎಂಬುವವರು ಪ್ರತಿವಾದಿಯವರಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ:25.04.2008 (ಪಿ.ಎಂ. ರಿಪೋರ್ಟ್) ರಂದು ಕೆಲಸದಿಂದುಂಟಾದ ಅಪಘಾತದಿಂದ ಮೃತ ಹೊಂದಿರುತ್ತಾರೆ, ಎಂದು ವಿವರಿಸುತ್ತಾ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923ರ ಅಡಿಯಲ್ಲಿ ಪರಿಹಾರ ಧನ ಕೋರಿ ಅವಲಂಬಿತ ವಾರಸುದಾರರೆಂದು ಹೇಳಿಕೊಂಡು ಮೃತ ಶಾಂತಪ್ಪ ತಂದೆ ಚಂದ್ರಪ್ಪ ಹಾದಿಮನಿ ಇವರ ವಾರಸುದಾರರಾದ ಶ್ರೀ/ಶ್ರೀಮತಿ (1) ಚಂದ್ರಪ್ಪ ತಂದೆ ಮುರುಗಪ್ಪ ಹಾದಿಮನಿ (2) ಶ್ರೀಮತಿ ನಿಂಗಮ್ಮ ಗಂಡ ಚಂದ್ರಪ್ಪ ಹಾದಿಮನಿ ಎಂಬುವವರು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ ಕಾರಣ ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಾವೇನಾದರೂ ಅಥವಾ ತಾವೂ ಸಹ ಮೃತ ಹೊಂದಿದವರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ಸೂಚನಾಫಲಕದಲ್ಲಿ ಪ್ರದರ್ಶಿಸಿದ ಅಥವಾ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ಅಥವಾ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮತ್ತು ಸದರಿ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಅಥವಾ ಅರ್ಜಿ ಬಾರದಿದ್ದಲ್ಲಿ ಸದರಿ ಅವಧಿ ಮುಗಿದ ನಂತರ ಮೇಲ್ಕಾಣಿಸಿದ ಅರ್ಜಿದಾರರ ಅರ್ಜಿಯನ್ನೇ ಮುಂದಿನ ವಿಚಾರಣೆಗಾಗಿ ತೆಗೆದುಕೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಕೊಪ್ಪಳ ಜಿಲ್ಲೆ, ಕೊಪ್ಪಳ.

ಪಿ.ಆರ್.791

ತಹಶೀಲ್ದಾರ್ ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಅಧಿಸೂಚನೆ

ಭಾರತ ಸರ್ಕಾರದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಸೆಂಟ್ರೆಲ್ ಆಕ್ಟ್ 22 ಆಫ್ 2005) ಸೆಕ್ಷನ್ 5(1), 5(1) ಮತ್ತು 19(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಂದಾಯ ಇಲಾಖೆಗೆ ಸೇರಿದ ತಹಶೀಲ್ದಾರ್‌ರ ಕಛೇರಿ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರಿರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ "ಸಾರ್ವಜನಿಕ ಅಧಿಕಾರ" ಮತ್ತು "ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರ" ಹಾಗೂ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ಈ ಕೆಳಕಂಡಂತೆ ಸರ್ಕಾರದಿಂದ ನೇಮಿಸಲಾಗಿದೆ.

(ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂ.ಇ.37 ವಿಮಕ 2005, ದಿನಾಂಕ:08.02.2006)

ಕ್ರ. ಸಂ.	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಮಾಹಿತಿ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಮಾಹಿತಿ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಮಾಹಿತಿ ಪ್ರಕಾರ ಮೇಲ್ಮನವಿ ಪ್ರಾಧಿಕಾರ
1.	ತಾಲ್ಲೂಕು ಕಛೇರಿ ತೀರ್ಥಹಳ್ಳಿ	ತಹಶೀಲ್ದಾರ್ ತೀರ್ಥಹಳ್ಳಿ	ತಾಲ್ಲೂಕು ಕಛೇರಿ ಸಂಬಂಧಪಟ್ಟ ಶಿರಸ್ತೇದಾರ್ (ವಿಷಯವಾರು)	ಉಪ ವಿಭಾಗಾಧಿಕಾರಿಗಳು, ಶಿವಮೊಗ್ಗ.
2.	ನಾಡ ಕಛೇರಿ ಮೇಗರವಳ್ಳಿ	ರಾಜಸ್ವ ನಿರೀಕ್ಷಕರು, ಆಗುಂಬೆ ಹೋಬಳಿ	ಗ್ರಾಮ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ	ಉಪ ತಹಶೀಲ್ದಾರ್, ಮೇಗರವಳ್ಳಿ
3.	ನಾಡ ಕಛೇರಿ, ಕೋಣಂದೂರು	ರಾಜಸ್ವ ನಿರೀಕ್ಷಕರು, ಅಗ್ರಹಾರ ಹೋಬಳಿ	ಗ್ರಾಮ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ	ಉಪ ತಹಶೀಲ್ದಾರ್ ಕೋಣಂದೂರು

ಬ (1) (ಅ) ತೀರ್ಥಹಳ್ಳಿ ತಾಲ್ಲೂಕಿನ ಸಾಮಾನ್ಯ ಮಾಹಿತಿಗಳು

ಕ್ರ. ಸಂ.	ವಿವರ	
1.	ಭೌಗೋಳಿಕ ವಿಸ್ತೀರ್ಣ	1247 ಚ.ಕಿ.ಮೀ. 12.5377 ಉದ್ದ, ಹೆಕ್ಟೇರ್
2.	ಒಟ್ಟು ಜನಸಂಖ್ಯೆ	143207 (2001ರ ಜನಗಣತಿ ಪ್ರಕಾರ)
1.	ಗ್ರಾಮೀಣ ಜನಸಂಖ್ಯೆ	128399
2.	ನಗರ ಜನಸಂಖ್ಯೆ	14808
3.	ನಗರ ಪ್ರದೇಶ	1
4.	ಗಂಡಸರು	72734
5.	ಹೆಂಗಸರು	72473
6.	ಪರಿಶಿಷ್ಟ–ಜಾತಿ	13779
7.	ಪರಿಶಿಷ್ಟ–ಪಂಗಡ	2326
8.	ಲಿಂಗಾನುಪಾತ	1000:1025
9.	ಜನಸಾಂದ್ರತೆ	115
3)	**ಶೈಕ್ಷಣಿಕ ಸಂಸ್ಥೆಗಳು**	
1)	ಪದವಿ ಪೂರ್ವ ಕಾಲೇಜು	09
2)	ಪದವಿ ಕಾಲೇಜು	03
3)	ಪ್ರಾಥಮಿಕ ಶಾಲೆಗಳು	271
4)	ಪ್ರೌಢ ಶಾಲೆಗಳು	36
5)	ಸಾಕ್ಷರತೆ ಪ್ರಮಾಣ	ಶೇ.81
4)	**ಮಳೆ ಪ್ರಮಾಣ**	
1)	ವಾರ್ಷಿಕ ಮಳೆ	3004.2 ಮೀ.ಮೀ.
2)	ವಾಸ್ತವಿಕ ಮಳೆ	3855.4 ಮೀ.ಮೀ.
3)	ಮಳೆ ಮಾಪನಗಳು	12
5)	**ಬ್ಯಾಂಕುಗಳು**	
1)	ವಾಣಿಜ್ಯ ಬ್ಯಾಂಕು	18
2)	ಗ್ರಾಮೀಣ ಬ್ಯಾಂಕು	04
3)	ಸಹಕಾರಿ ಬ್ಯಾಂಕು (ಪಿ.ಎಲ್.ಡಿ.ಬಿ.)	01
4)	ಕ್ರೆಡಿಟ್ ಸಹಕಾರಿ ಸಂಘ	–
6)	**ರಸ್ತೆಗಳು**	
1)	ರಾಷ್ಟ್ರೀಯ ಹೆದ್ದಾರಿ	40 ಕಿ.ಮೀ.
2)	ರಾಜ್ಯ ಹೆದ್ದಾರಿ	148.38 ಕಿ.ಮೀ.
3)	ಜಿಲ್ಲಾ ಮುಖ್ಯ ರಸ್ತೆ	252.20 ಕಿ.ಮೀ.
7)	ನಾಡಕಛೇರಿಗಳು	02
8)	ಹೋಬಳಿಗಳು	05
9)	ಕಂದಾಯ ಗ್ರಾಮಗಳು	247
10)	ಗ್ರಾಮ ಪಂಚಾಯಿತಿಗಳು	38

4.ಬಿ(1) ಇ. ಕಾರ್ಯವಿಧಾನ

1) ತಹಶೀಲ್ದಾರ್ ತೀರ್ಥಹಳ್ಳಿ ತಾಲ್ಲೂಕಿನ ಕಂದಾಯಾಡಳಿತ ವ್ಯವಸ್ಥೆಯ ಮುಖ್ಯಸ್ಥರಾಗಿದ್ದು ಆಡಳಿತ ಹಾಗೂ ಕಾನೂನು ಸುವ್ಯವಸ್ಥೆಯ ಸಂಪೂರ್ಣ ಅಧಿಕಾರ ಹೊಂದಿರುವವರಾಗಿದ್ದಾರೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 11 ರಂತೆ ತಾಲ್ಲೂಕಿಗೆ ಒಬ್ಬರಂತೆ ತಹಶೀಲ್ದಾರ್‌ರನ್ನಾಗಿ ನೇಮಕ ಮಾಡಲಾಗಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ

ಮತ್ತು ಕೇಂದ್ರ ಹಾಗೂ ರಾಜ್ಯ ಅಧಿನಿಯಮಗಳಲ್ಲಿ ನಿಯಮಿಸಿದ ಎಲ್ಲಾ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ತಹಶೀಲ್ದಾರ್ ತಾಲ್ಲೂಕಿನ ದಂಡಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

4(ಬಿ) 11.

11. ಕಂದಾಯ ಇಲಾಖೆಯು ಈ ಕೆಳಕಂಡ ಸಾಮಾನ್ಯ ಕಾರ್ಯಗಳನ್ನು ಪ್ರಮುಖವಾಗಿ ನಿರ್ವಹಿಸುತ್ತದೆ.

ಅ.1) ಕಾರ್ಯಕಾರಿ ದಂಡಾಧಿಕಾರಿಯ ಕಾರ್ಯನಿರ್ವಹಣೆ

2) ಸಾರ್ವಜನಿಕ ದೂರು ನಿರ್ವಹಣೆ

3) ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆ.

4) ಎಲ್ಲಾ ರೀತಿಯ ಚುನಾವಣೆಗಳನ್ನು ನಡೆಸುವುದು.

5) ಎಲ್ಲಾ ರೀತಿಯ ಗಣತಿ ಕಾರ್ಯಗಳನ್ನು ನಡೆಸುವುದು (ಜನಗಣತಿ, ಜಾನುವಾರು, ಗಣತಿ, ಕೃಷಿ ಗಣತಿ, ಆರ್ಥಿಕಗಣತಿ)

6) ಜಿಲ್ಲಾಧಿಕಾರಿಗಳ ಪರವಾಗಿ ಶಿಷ್ಟಾಚಾರ ಕಾರ್ಯನಿರ್ವಹಣೆ.

7) ಪ್ರಕೃತಿ ವಿಕೋಪ, ನೈಸರ್ಗಿಕ ವಿಕೋಪ ಮತ್ತು ಮಾನವ ನಿರ್ಮಿತ ವಿಕೋಪಗಳಿಂದ ಬಾದಿತರಾದವರಿಗೆ ಪರಿಹಾರ, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯನಿರ್ವಹಣೆ.

8) ವೃದ್ದಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಸಂಧ್ಯಾಸುರಕ್ಷಾ ವೇತನ ಮೊದಲಾದ ಸಾಮಾಜಿಕ ಸುರಕ್ಷತೆಯ ನಿರ್ವಹಣೆ.

9) ಆಯುಧ ಕಾಯಿದೆಯಡಿ ಪ್ರಕರಣ ವಿಲೇವಾರಿ.

10) ಆದಾಯ, ಜಾತಿ, ವಾಸ್ತವ್ಯದ ಬಗ್ಗೆ ದೃಢೀಕರಣ ನೀಡುವುದು.

11) ನ್ಯಾಯಾಲಯದಲ್ಲಿ ಸರ್ಕಾರಿ ವ್ಯಾಜ್ಯ ನಿರ್ವಹಣೆ.

12) ಸರ್ಕಾರದಿಂದ ಕಾಲಕಾಲಕ್ಕೆ ಜಾರಿಗೆ ಬರುವ ವಿವಿಧ ಯೋಜನೆಗಳ ಮತ್ತು ಕಾರ್ಯಗಳ ನಿರ್ವಹಣೆ.

ಆ. ಕಂದಾಯ ಆಡಳಿತ

1) ರಾಜ್ಯದಲ್ಲಿನ ಭೂ ದಾಖಲೆಗಳ ನಿರ್ವಹಣೆ, ಎಲ್ಲಾ ಜಮೀನುಗಳ ಭೂ ಮಾಪನ.

2) ಭೂ ಕಂದಾಯ ನೀರು ತೆರಿಗೆ, ಸರ್ಕಾರಿ ಬಾಕಿ ವಸೂಲಾತಿ.

3) ಗೋಮಾಳ, ಕೆರೆ, ಅಂಗಳ, ಉಪವನಗಳು ಇತ್ಯಾದಿ ಸಾಮುದಾಯಿಕ ಜಮೀನುಗಳನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಕಾಯ್ದಿರಿಸಿದ ಜಮೀನುಗಳ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ.

4) ಅಕ್ರಮ ಸಕ್ರಮ ಸಮಿತಿಗೆ ಪೂರಕ ಮಾಹಿತಿ ಹಾಗೂ ದಾಖಲಾತಿ ನಿರ್ವಹಣೆ.

5) ಭೂ ಸುಧಾರಣೆ ಮತ್ತು ಗಣಿಗಾರಿಕೆ ನಿಬಂಧನೆಗಳ ನಿರ್ವಹಣೆ.

6) ಭೂ ಪರಿವರ್ತನೆ.

7) ಕರ್ನಾಟಕ ಭೂ ಕಂದಾಯ ಕಾಯ್ದೆಯಡಿಯಲ್ಲಿ ಬರುವ ಎಲ್ಲ ವ್ಯವಹಾರಗಳ ನಿರ್ವಹಣೆ.

ಇ. ಕಾನೂನು ಆಡಳಿತ

ತಹಶೀಲ್ದಾರ್ ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆಗಳ ಮತ್ತು ಕಾನೂನುಗಳ ವಿವರ

1) ಕರ್ನಾಟಕ ಭೂ ಕಂದಾಯ ಕಾಯ್ದೆಯ ಅಧಿನಿಯಮ 1961 ಮತ್ತು ನಿಯಮಾವಳಿ 1974

2) ಕರ್ನಾಟಕ ಹಲವು ಇನಾಂ ರದ್ಧತಿ ಅಧಿನಿಯಮ 1977

3) ಕರ್ನಾಟಕ ಗ್ರಾಮ ನೌಕರಿಗಳ ರದ್ಧತಿ ಅಧಿನಿಯಮ–1961

4) ಕರ್ನಾಟಕ ಪುರ ಸಭೆಗಳ ಅಧಿನಿಯಮ–1964

5) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಇತರ ಉಪ ಬಂಧಗಳ ಅಧಿನಿಯಮ–1974 ಮತ್ತು ನಿಯಮಾವಳಿ–1975

6) ಕರ್ನಾಟಕ ವೃದ್ದಾಪ್ಯ ವೇತನ ನಿಯಮಾವಳಿ

7) ನಿರ್ಗತಿಕ ವಿಧವಾ ವೇತನ ನಿಯಮಾವಳಿ.

8) ದೈಹಿಕ ಅಂಗವಿಕಲರಿಗೆ ನಿರ್ವಹಣಾ ಭತ್ಯ ಮಂಜೂರಿ ನಿಯಮಾವಳಿ.

9) ಕರ್ನಾಟಕ ಋಣ ವಿಮೋಚನಾ ಅಧಿನಿಯಮ.

10) ಮತದಾರರ ನೋಂದಣಿ ನಿಯಮಾವಳಿ.

11) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಅಧಿನಿಯಮ–1966

12) ಕರ್ನಾಟಕ ನೀರಾವರಿ ಅಧಿನಿಯಮ–1965

13) ಕರ್ನಾಟಕ ನೀರಾವರಿ (ನೀರಿನ ಕರ ಆಕರಣೆ) ನಿಯಮಾವಳಿ–1965

14) ಕರ್ನಾಟಕ ಅರಣ್ಯ ನಿಯಮಾವಳಿ–1969

15) ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ–1966.

16) ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ–1974 ಮತ್ತು ಅದರಡಿಯ ನಿರ್ವಹಣೆ.

"ದಂಡಾಧಿಕಾರಿಯಾಗಿ ತಹಶೀಲ್ದಾರರು ಈ ಕೆಳಗಿನ ಕಾಯಿದೆಗಳಡಿಯಲ್ಲಿ ಅಧಿಕಾರ ಹಾಗೂ ಕರ್ತವ್ಯಗಳನ್ನು ಹೊಂದಿರುತ್ತಾರೆ."

1) ದಂಡ ಪ್ರಕ್ರಿಯೆ ಸಂಹಿತೆ–1974.

2) ಭಾರತ ಸಾಕ್ಷ್ಯ ಅಧಿನಿಯಮ–1963

3) ಕರ್ನಾಟಕ ಪೊಲೀಸ್ ಅಧಿನಿಯಮ–1976

4) ಜೀತದಾಳು ಪದ್ಧತಿ (ನಿರ್ಮೂಲನೆ) ಅಧಿನಿಯಮ–1976

5) ಪ್ರಮಾಣ ವಚನ ಅಧಿನಿಯಮ–1999

6) ಭಾರತೀಯ ಮುದ್ರಾಂಕ ಅಧಿನಿಯಮ–1899

7) ಪ್ರಾಣಿಗಳ ಹಿಂಸೆ ಅಧಿನಿಯಮ–1960

8) ಕರ್ನಾಟಕ ಭಿಕ್ಷಾಟನಾ ಅಧಿನಿಯಮ–1975

9) ಸಾರ್ವಜನಿಕ ಆರೋಗ್ಯ ಅಧಿನಿಯಮ–1944

10) ಕರ್ನಾಟಕ ಮಾರಾಟಕರ ಅಧಿನಿಯಮ–1957

11) ಪರಿಶಿಷ್ಟ–ಜಾತಿ, ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಷೇದ) ಅಧಿನಿಯಮ–1989

12) ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ಅಧಿನಿಯಮ

13) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ನಿರ್ವಹಣೆ.

4.ಬಿ.(1) ರಲ್ಲಿ.11.

ತಾಲ್ಲೂಕು ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳ ಮತ್ತು ಕರ್ತವ್ಯದ ವಿವರಗಳು.

ಕ್ರ.ಸಂ.	ವಿವರ
1)	ತಹಶೀಲ್ದಾರ್
2)	ತಾಲ್ಲೂಕು ಶಿರಸ್ತೇದಾರ್
	1) ಪ್ರಥಮ ದರ್ಜೆ ಸಹಾಯಕರು
	2) ದ್ವಿತೀಯ ದರ್ಜೆ ಸಹಾಯಕರು
	3) ಬೆರಳಚ್ಚುಗಾರರು
	4) ವಾಹನ ಚಾಲಕರು
	5) ದಫೇದಾರ್
	6) ಜವಾನರು
2)	ಹಕ್ಕುದಾಖಲೆ ಶಿರಸ್ತೇದಾರ್
	1) ಪ್ರಥಮ ದರ್ಜೆ ಸಹಾಯಕರು
	2) ದ್ವಿತೀಯ ದರ್ಜೆ ಸಹಾಯಕರು
	3) ದಫ್ತರ್ ಬಂದ್
	4) ರಾಜಸ್ವ ನಿರೀಕ್ಷಕರು
	5) ಜವಾನರು
	6) ಗ್ರಾಮ ಲೆಕ್ಕಿಗರು
	7) ಕಂಪ್ಯೂಟರ್ ಆಪರೇಟರ್
3)	ಚುನಾವಣಾ ಶಿರಸ್ತೇದಾರ್
	1) ಪ್ರಥಮ ದರ್ಜೆ ಸಹಾಯಕರು

ಕ್ರ.ಸಂ.	ವಿವರ
	2) ದ್ವಿತೀಯ ದರ್ಜೆ ಸಹಾಯಕರು
4)	ಆಹಾರ ಶಿರಸ್ತೇದಾರ್
	1) ಆಹಾರ ನಿರೀಕ್ಷಕರು
	2) ದ್ವಿತೀಯ ದರ್ಜೆ ಸಹಾಯಕರು
5)	ಉಪ ತಹಶೀಲ್ದಾರ್, ನಾಡಕಛೇರಿ
	1) ದ್ವಿತೀಯ ದರ್ಜೆ ಸಹಾಯಕರು
	2) ರಾಜಸ್ವ ನಿರೀಕ್ಷಕರು
	3) ಬೆರಳಚ್ಚುಗಾರರು
	4) ಜವಾನರು
6)	ಪರ್ಯಾವೇಕ್ಷಕರು
	1) ಪ್ರಥಮ ದರ್ಜೆ ಭೂ ಮಾಪಕರು
	2) ಪ್ರಥಮ ದರ್ಜೆ ಸಹಾಯಕರು
	3) ದ್ವಿತೀಯ ದರ್ಜೆ ಸಹಾಯಕರು
	4) ಜವಾನರು
	5) ದಫ್ತರ್ ಬಂದ್

III. 4(1) (III)

ತಾಲ್ಲೂಕು ಕಛೇರಿಯ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ.

ಕಾರ್ಯವಿಧಾನ

ತಾಲ್ಲೂಕು ಕಛೇರಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ಕಾಲಕಾಲಕ್ಕೆ ನೀಡಲಾಗುವ ಕಾರ್ಯನಿರ್ವಹಣೆ, ಅಧಿಕೃತ ಜ್ಞಾಪನಗಳಲ್ಲಿ ಕಾರ್ಯನಿರ್ವಹಣಾ ಆದೇಶ ಜಾರಿಗೊಳಿಸಿದೆ ಅಂತೆಯೇ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

ಮೇಲೆ ತಿಳಿಸಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ (ಗ್ರೂಪ್ ಸಿ ಮತ್ತು ಡಿ) ತಹಶೀಲ್ದಾರ್‌ರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಕಛೇರಿಯಲ್ಲಿ ನಿರ್ವಹಿಸುವ ಎಲ್ಲಾ ಸಂಬಂಧಿಸಿದ ಶಾಖೆಗಳ ವಿಷಯಗಳಲ್ಲಿ ಅಂತಿಮ ಕೈಗೊಳ್ಳುವ ಅಧಿಕಾರಿ ತಹಶೀಲ್ದಾರ್‌ರಾಗಿರುತ್ತಾರೆ.

1) ಕಾಗದ ಪತ್ರಗಳ ಸ್ವೀಕೃತಿ ವಿಲೇವಾರಿ.

ಸಾರ್ವಜನಿಕರಿಂದ ಅಧೀನ ಕಛೇರಿಗಳಿಂದ ಮತ್ತು ಸರ್ಕಾರ ಹಾಗೂ ಮೇಲಾಧಿಕಾರಿಗಳಿಂದ ಬರುವಂತ ಎಲ್ಲಾ ಕಾಗದ ಪತ್ರಗಳನ್ನು ಕಡತಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ಸ್ವೀಕರಿಸಿ ಸಾರ್ವಜನಿಕರ ಮನವಿ ಬಗ್ಗೆ ಸ್ಥಳದಲ್ಲಿ ಸ್ವೀಕೃತಿ ಪತ್ರವನ್ನು ನೀಡಿದ ನಂತರ ಕಛೇರಿಯ ತಾಲ್ಲೂಕು ಶಿರಸ್ತೇದಾರ್ ಮುಖಾಂತರ ತಹಶೀಲ್ದಾರ್ ಗಮನಕ್ಕೆ ತಂದು ಸ್ವೀಕೃತಿ ಶಾಖೆಯಲ್ಲಿ ದಾಖಲಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಪ್ರತಿ ಕಡತ ಕಾಗದ ಪತ್ರಗಳನ್ನು ಶಾಖಾವಾರು ಗುರುತಿಸುವಂತೆ ಹಾಕಿದ ನಂತರ ಅಗತ್ಯ ಕ್ರಮ ಕೈಗೊಳ್ಳಲು ನೀಡಲಾಗುತ್ತದೆ.

4.(ಬಿ) (1) 4.

ಕ್ರ. ಸಂ.	ಕಛೇರಿ ಪ್ರಕಾರ್ಯಗಳ ನಿರ್ವಹಣೆಗೆ ರೂಪಿಸಿದ ಸೂತ್ರಗಳು
1.	ತಹಶೀಲ್ದಾರ್ ಕಛೇರಿಯಲ್ಲಿ ಸ್ವೀಕರಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ದಾಖಲಿಸಿ ವಿಷಯ ನಿರ್ವಾಹಕರಿಗೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ.
2.	ಸಾರ್ವಜನಿಕರಿಂದ ಸ್ವೀಕರಿಸಲಾಗುವ ಎಲ್ಲಾ ಕಾಗದ ಪತ್ರಗಳಿಗೆ ಸ್ವೀಕೃತಿ ನೀಡುವುದಲ್ಲದೆ ಕಾರ್ಯಗತ ಅವಧಿ ನಿಗದಿಪಡಿಸಿ ತಿಳಿಸಲಾಗುತ್ತದೆ.
3.	ಸಾರ್ವಜನಿಕರ ಕುಂದು ಕೊರತೆಗಳ ನಿವಾರಣೆ ಬಗ್ಗೆ ಸವೀಕರಿಸಲಾಗುವ ಎಲ್ಲಾ ಮನವಿಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಮೂದಿಸಿ ಕ್ಷಿಪ್ತ ಕಾಲದಲ್ಲಿ ಉತ್ತರ ನೀಡುವುದು.

ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲನೆ ಬಗ್ಗೆ ಪ್ರತಿ ಮಾಹೆಯಲ್ಲೂ ಕಂದಾಯ ನಿರೀಕ್ಷಕರ ಮತ್ತು ಗ್ರಾಮ ಲೆಕ್ಕಿಗರ ಸಭೆ ಕರೆಯಲಾಗುವುದು.

ಕಛೇರಿ ಕೈಪಿಡಿ ನಿಯಮಾವಳಿ ರೀತ್ಯಾ ಕಾಗದ ಪತ್ರಗಳನ್ನು ವಿಷಯ ನಿರ್ವಾಹಕರು ಸ್ವೀಕರಿಸಿ ಗರಿಷ್ಠ 5 ದಿನಗಳೊಳಗಾಗಿ ವಿಷಯ ನಿರ್ವಾಹಕರು ಸ್ವೀಕರಿಸುವ ಎಲ್ಲಾ ಕಾಗದ ಪತ್ರಗಳನ್ನು ವಿಷಯ ನಿರ್ವಾಹಕರ ದಿನಚರಿಯಲ್ಲಿ ನಮೂದಿಸಿಕೊಂಡು ತದನಂತರ ವಿಷಯ ವಹಿಯಲ್ಲಿ ಅನುಕ್ರಮವಾಗಿ ದಾಖಲಿಸಿಕೊಂಡು ಕಡತಗಳಲ್ಲಿ ಟಿಪ್ಪಣಿ ಹಾಕಿ ಮಂಡಿಸುತ್ತಾರೆ. ವಿಷಯ ನಿರ್ವಾಹಕರೆಲ್ಲರೂ ಕಛೇರಿ ಕಾರ್ಯವಿಧಾನ ರೀತ್ಯ ಐದುಕಟ್ಟು ವಿಧಾನ ಅಳವಡಿಸಿ ಕಾರ್ಯನಿರ್ವಹಿಸುತ್ತಾರೆ.

ವಿಷಯ ನಿರ್ವಾಹಕರಿಂದ ಬಂದಂತಹ ಎಲ್ಲ ಕಡತಗಳ ಪರಿಶೀಲನೆ ಮಾಡಿ ಶಾಖಾ ಮುಖ್ಯಸ್ಥರು ವಿಳಂಬವಾಗದ ರೀತಿ ಕಡತದಲ್ಲಿ ವಿಷಯವಾರು ತೀರ್ಮಾನ ಕೈಗೊಳ್ಳುವ ನಿಟ್ಟಿನಲ್ಲಿ ಸೂಕ್ತ ಅಭಿಪ್ರಾಯದೊಂದಿಗೆ ಸಲ್ಲಿಸುತ್ತಾರೆ.

ಕಡತಗಳಲ್ಲಿ ತೀರ್ಮಾನ ಕೈಗೊಳ್ಳುವ ಬಗ್ಗೆ ಅನುಸರಿಸುವ ಬಗ್ಗೆ ಕಾರ್ಯವಿಧಾನ ಕಛೇರಿ ಕೈಪಿಡಿಯ ನಿಯಮಾವಳಿ ರೀತ್ಯಾ ಕ್ರಮವಹಿಸಲಾಗುತ್ತದೆ.

4 ಬಿ (1) 5

ತಹಶೀಲ್ದಾರರ ನಿಯಂತ್ರಣದಲ್ಲಿರುವ ದಾಸ್ತಾವೇಜುಗಳ ಪ್ರವರ್ಗಗಳು ತಹಶೀಲ್ದಾರರು ಮೇಲೆ ರೂಪಿಸಲಾದ ಕಾಯಿದೆ ನಿಯಮಗಳಡಿ ನಿರ್ವಹಿಸುವ ಎಲ್ಲಾ ಕಡತಗಳಲ್ಲಿ ಅಂತಿಮ ನೀಡಿ ಮುಕ್ತಾಯವಾದ ನಂತರ ಪ್ರತಿ ಕಡತಗಳ ಪ್ರಾಮುಖ್ಯತೆಯನ್ನು ಅನುಸರಿಸಿ ಪ್ರವರ್ಗ 'ಎ' 'ಬಿ' 'ಸಿ' 'ಡಿ' ಮತ್ತು 'ಇ' ಎಂದು ವರ್ಗೀಕರಿಸಿ ನಿರ್ವಹಿಸಲಾಗುತ್ತಿದೆ.

ಪ್ರತಿ ವರ್ಗೀಕರಣ ಅವಧಿ ಈ ಕೆಳಕಂಡಂತಿರುತ್ತದೆ.

"ಎ" ಡಿಸ್– ಶಾಶ್ವತ

"ಬಿ" ಡಿಸ್–30 ವರ್ಷಗಳು

"ಸಿ" ಡಿಸ್–10 ವರ್ಷಗಳು

"ಡಿ" ಡಿಸ್–05 ವರ್ಷಗಳು

"ಇ" ಡಿಸ್–01 ವರ್ಷ

4 ಬಿ. (1) 6

ಕಛೇರಿಯ ಕೆಲಸಕ್ಕಾಗಿ ಉಪಯೋಗಿಸಬೇಕಾದ ವಹಿಗಳು ದಾಖಲೆಗಳು:

ಕಛೇರಿಯ ಕೆಲಸದ ಬಗ್ಗೆ ಈ ಕೆಳಗಿನ ವಹಿಗಳನ್ನು ಇಟ್ಟು ಕೆಲಸ ನಿರ್ವಹಿಸಲಾಗುತ್ತದೆ.

ಕ್ರ.ಸಂ.	ವಿವರ
1.	ಟಪಾಲು ವಹಿ
2.	ಅರೆ ಸರ್ಕಾರಿ ಪತ್ರಗಳ ವಹಿ
3.	ಚುಕ್ಕೆ ಗುರುತಿನ ಪ್ರಶ್ನೆ ವಹಿ
4.	ಹಾಜರಾತಿ ವಹಿ
5.	ಚಲನ್ ವಹಿ
6.	ಅಕ್ರಮ ಸಕ್ರಮ ಮಂಜೂರಾತಿ ವಹಿ
7.	ಮನೆ ನಿವೇಶನ ಮಂಜೂರಾತಿ ವಹಿ
8.	ಬಂದೂಕು ಪರವಾನಿಗೆ ವಹಿ
9.	ವೃದ್ಧಾಪ್ಯ, ವಿಧವಾ, ಅಂಗವಿಕಲ ವೇತನ ವಹಿ
10.	ಸಂಧ್ಯಾ ಸುರಕ್ಷಾ ವಹಿ
11.	ವಿಷಯ ನಿರ್ವಾಹಕರುಗಳಲ್ಲಿರುವ ವಹಿಗಳು
	ಎ) ದಿನ ವಹಿ
	ಬಿ) ದಿನಚರಿ ವಹಿ
	ಸಿ) ವಾರ ವಹಿ
	ಡಿ) ತಿಂಗಳ ಪ್ರಗತಿ ವಹಿ
12.	ವಿವಿಧ ಲೆಕ್ಕ ಶೀರ್ಷಿಕೆಗಳ ಸಿಬ್ಬಂದಿ ವೇತನ ವಹಿ

ಕ್ರ.ಸಂ.	ವಿವರ
13.	ಪ್ರಕೃತಿ ವಿಕೋಪ ಪರಿಹಾರ ಮಂಜೂರಾತಿ ವಹಿ
14.	ಆರಾಧನಾ ತಸ್ಥಿಕ್ ಮಂಜೂರಾತಿ ವಹಿ
15.	ಭೂ ಪರಿವರ್ತನೆ ಹಿಂಬರಹ ವಹಿ
16.	ಸೇವಾ ವಹಿಯ ಸಂಚಲನ ವಹಿ
17.	ಭೂ ಸುಧಾರಣಾ ಮಂಜೂರಾತಿ ವಹಿ

4 ಬಿ (1) 7.

ಅದರ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು.

1) ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು.

2) ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲನೆ ಬಗ್ಗೆ ಸಭೆಗಳನ್ನು ಏರ್ಪಡಿಸುವುದು.

3) ಸಾರ್ವಜನಿಕರ ಕುಂದುಕೊರತೆ ಆಲಿಸುವುದು.

4) ಪಾರದರ್ಶಕ ಕಾಯ್ದೆ ಅನುಷ್ಠಾನ

5) ಎಲ್ಲಾ ವರ್ಗದ ಜನರಿಂದ ಸ್ವೀಕರಿಸುವಂತಹ ಅಹವಾಲುಗಳು ಸಾರ್ವಜನಿಕರ ಸಂಘ ಸಂಸ್ಥೆಗಳ ಕುಂದುಕೊರತೆಗಳಲ್ಲದೆ, ಇನ್ನಿತರ ಸಂಘಟನೆಗಳಿಂದ ನಡೆಸುವ ಪ್ರತಿಭಟನೆಗಳ ಅಹವಾಲುಗಳನ್ನು ಸ್ವೀಕರಿಸಿ ಸಂಬಂಧಿಸಿದವರಿಗೆ ರವಾನಿಸಿ ಮಾಹಿತಿ ಪಡೆದು ಪರಿಹಾರ ಒದಗಿಸುವುದಲ್ಲದೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗುತ್ತಿದೆ. ಸಾರ್ವಜನಿಕ ದೂರು ಕೋಶ ಮುಖೇನ ಸ್ವೀಕರಿಸುವ ಅರ್ಜಿಗಳ ಪರಿಶೀಲನೆ ಹಾಗೂ ವಿಲೇವಾರಿ.

6) ಪ್ರಕೃತಿ ವಿಕೋಪ

ಪ್ರಕೃತಿ ವಿಕೋಪಗಳಿಂದ ಅತಿವೃಷ್ಠಿ ಸೇರಿದಂತೆ ಎಲ್ಲಾ ವಿಕೋಪಗಳ ಬಗ್ಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತಿದೆ. ಅಲ್ಲದೆ ಸಾರ್ವಜನಿಕರಿಗೆ ಮನವರಿಕೆ ಅಗತ್ಯವಿದ್ದಲ್ಲಿ ಸಂಕಷ್ಟದ ಮಾಹಿತಿ ಪಡೆಯಲು ಹಾಗೂ ತುರ್ತು ಪರಿಹಾರ ನೀಡಲು ತಾಲ್ಲೂಕು ಕಛೇರಿಯಲ್ಲಿ ಕಂಟ್ರೋಲ್ ರೂಂ ತೆರೆಯಲಾಗಿದೆ.

ತಾಲ್ಲೂಕು ಕಛೇರಿಯ ದೂರವಾಣಿ ಸಂಖ್ಯೆ:958181 228239

7) ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94ಸಿ ರಡಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ.

4.ಬಿ.(1) 8.

ಮಂಡಳಿ, ಪರಿಷತ್ತು ಸಮಿತಿಗಳಲ್ಲಿ ಎರಡು ಹಾಗೂ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳಿಂದ ರಚಿಸಲಾದ ಸಮಿತಿಯ ಸಲಹೆ ಹಾಗೂ ಸರ್ಕಾರದ ನಡುವಳಿಗಳು.

ಕಛೇರಿಯಲ್ಲಿ ಸರ್ಕಾರದ ಆದೇಶದಂತೆ ಅಕ್ರಮ ಸಕ್ರಮೀಕರಣ ಸಮಿತಿ ಭೂ ನ್ಯಾಯ ಮಂಡಳಿಯ ಸಮಿತಿ ಆರಾಧನಾ ಸಮಿತಿಗಳು ರಚನೆಯಾಗಿ ಕೆಲಸ ನಿರ್ವಹಿಸಲಾಗುತ್ತಿದೆ.

4 ಬಿ. (1) 9: 10.

ತಾಲ್ಲೂಕು ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಮಾಹಿತಿ ಪುಸ್ತಕ ಮತ್ತು ವೇತನ ವಿವರ. ತಹಶೀಲ್ದಾರ್ ಕಛೇರಿಯ ಮುಖ್ಯಸ್ಥರಾಗಿದ್ದು ಕಛೇರಿಯ ಮುಖ್ಯಸ್ಥರಿಗೆ ಸರ್ಕಾರ ಇಲ್ಲವೇ ಇಲಾಖೆ ನೀಡಿದ ಹಕ್ಕು ಬಾಧ್ಯತೆಗಳಿಗನುಗುಣವಾಗಿ ಕರ್ತವ್ಯ ನಿರ್ವಹಣೆ:

ಕ್ರ.ಸಂ.	ಅಧಿಕಾರಿ: ನೌಕರರ ಪದನಾಮ	ವೇತನ ಶ್ರೇಣಿ	ಹುದ್ದೆಗಳು
1.	ತಹಶೀಲ್ದಾರ್	11400–12600	1
2.	ತಾಲ್ಲೂಕು ಶಿರಸ್ತೇದಾರ್	10,000–18,150	4
3.	ಉಪ ತಹಶೀಲ್ದಾರ್	10,000–18,150	2
4.	ಪ್ರಥಮದರ್ಜೆ ಸಹಾಯಕರು	7275–13350	5
5.	ಪ್ರಥಮದರ್ಜೆ ರಾಜಸ್ವ ನಿರೀಕ್ಷಕರು	7275–13350	5
6.	ಪ್ರಥಮದರ್ಜೆ ಆಹಾರ ಮತ್ತು ನಿರೀಕ್ಷಕರು	7272–13350	2
7.	ಪ್ರಥಮದರ್ಜೆ ಭೂ ಮಾಪಕರು	7275–13350	1
8.	ಬೆರಳಚ್ಚುಗಾರರು	5800–10500	3

ಕ್ರ.ಸಂ.	ಅಧಿಕಾರಿ: ನೌಕರರ ಪದನಾಮ	ವೇತನ ಶ್ರೇಣಿ	ಹುದ್ದೆಗಳು
9.	ದ್ವಿತೀಯ ದರ್ಜೆ ಸಹಾಯಕರು	5800–10500	14
10.	ದ್ವಿತೀಯದರ್ಜೆ ಭೂ ಮಾಪಕರು	5800–10500	9
11.	ಗ್ರಾಮ ಲೆಕ್ಕಿಗರು	5800–10500	46
12.	ದಫೇದಾರ್	5200–8200	1
13.	ಆರ್.ಆರ್. ಅಟೆಂಡರ್	5200–8200	1
14.	ವಾಹನ ಚಾಲಕರು	5800–10500	1
15.	ದಫ್ತರ್ ಬಂದ್	5200–8200	1
16.	ಜವಾನರು	4800–7275	8
17.	ಬಾಂದು ಜವಾನ	4800–7275	6

4 ಬಿ.(1) 9:10

2007–08ನೇ ಸಾಲಿನ ಆಯವ್ಯಯ ಬಗ್ಗೆ ಟಿಪ್ಪಣಿ

ತೀರ್ಥಹಳ್ಳಿ ತಾಲ್ಲೂಕಿಗೆ ಸಂಬಂಧಪಟ್ಟಂತೆ 2007–08ನೇ ಸಾಲಿನ ಆಯವ್ಯಯ ಅಂದಾಜು ಈ ಕೆಳಗಿನಂತಿದೆ.

ಕ್ರ. ಸಂ.	ಲೆಕ್ಕ ಶೀರ್ಷಿಕೆ	ವಿವರ	ಆಯವ್ಯಯದ ಅಂದಾಜು ವೆಚ್ಚದ ಮೊಬಲಗು
1.	2015–00–102–0–01	ವೇತನ	6,54,117
2.	2053–00–094–7–01	ವೇತನ	1,76,890
3.	2053–00–094–7–01	ವೇತನ	36,24,214
4.	2053–00–094–7–01	ವೇತನ	13,29,141
5.	2506–00–101–1–01	ವೇತನ	2,99,799
6.	2011–02–101–0–09	ವೇತನ	1,41,536
7.	2053–00–094–7–01	ವೇತನ	20,67,801
8.	2515–00–101–0–17	ವೇತನ	1,24,452
9.	2071–01–200–0–06	ವೇತನ	24,000
10.	2071–01–200–0–06	ವೇತನ	66,000

4 ಬಿ.(1) 14.

ಕಛೇರಿಯಲ್ಲಿರುವ ಮಾಹಿತಿಯನ್ನು ವೆಬ್‌ಸೈಟ್ ನಲ್ಲಿ ನೀಡಿರುವ ಬಗ್ಗೆ ವಿವರ ಕಛೇರಿಯಲ್ಲಿ ಪಹಣಿ ಮತ್ತು ಖಾತೆ ಬದಲಾವಣೆ ಸಂಬಂಧಿಸಿದಂತೆ "ಕಿಯೋನಿಕ್ಸ್ ಕೇಂದ್ರ" ತೆರೆಯಲಾಗಿದ್ದು ಜನರಿಗೆ ಪಹಣಿ ಪತ್ರಗಳನ್ನು ನೀಡಲಾಗುತ್ತಿದೆ.

4 ಬಿ.(1) 15.

ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲು ಲಭ್ಯವಿರುವ ಸುತ್ತೋಲೆಗಳು ಹಾಗೂ ಗ್ರಂಥಾಲಯಗಳು ಮತ್ತು ವಾಚನಾಲಯಗಳು ಇದ್ದಲ್ಲಿ ಅದರ ವಿವರ.

ಕಛೇರಿಯಲ್ಲಿ ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಸುತ್ತೋಲೆಗಳು ಇರುತ್ತದೆ. ಗ್ರಂಥಾಲಯ ಇರುವುದಿಲ್ಲ.

4 ಬಿ.(1) 16.

ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು ಪದನಾಮಗಳು ಮತ್ತು ಇತರ ವಿವರಗಳು

ಅಧಿಸೂಚನೆಗಳು

ಭಾರತ ಸರ್ಕಾರದ ಮಾಹಿತಿ ಪಡೆಯಲು ಮತ್ತು ಅಧಿನಿಯಮ 2005 (ಸೆಂಟ್ರಲ್ ಆಕ್ಟ್ 22 ಎಫ್ 2005) ಸೆಕ್ಷನ್ 5(1), 5(2) ಮತ್ತು 19(1) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಂದಾಯ ಇಲಾಖೆಗೆ ಸೇರಿದ ತಾಲ್ಲೂಕು ಕಛೇರಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆ ಅನ್ವಯ ಒದಗಿಸಲು ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಈ ಕೆಳಕಂಡಂತೆ ಸರ್ಕಾರದಿಂದ ನೇಮಿಸಲಾಗಿದೆ.

ಕ್ರ. ಸಂ.	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕುಕಾಯ್ದೆ 2005 ಕಲಂ 5(1)ರ ಮಾಹಿತಿ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಮಾಹಿತಿ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಮಾಹಿತಿ ಪ್ರಕಾರ ಮೇಲ್ಮನವಿ ಪ್ರಾಧಿಕಾರ
1.	ತಾಲ್ಲೂಕು ಕಛೇರಿ ತೀರ್ಥಹಳ್ಳಿ	ತಹಶೀಲ್ದಾರ್ ತೀರ್ಥಹಳ್ಳಿ	ತಾಲ್ಲೂಕು ಕಛೇರಿ ಸಂಬಂಧಪಟ್ಟ ಶಿರಸ್ತೇದಾರ್ (ವಿಷಯವಾರು)	ಉಪ ವಿಭಾಗಾಧಿಕಾರಿಗಳು, ಶಿವಮೊಗ್ಗ.
2.	ನಾಡ ಕಛೇರಿ ಮೇಗರವಳ್ಳಿ	ರಾಜಸ್ವ ನಿರೀಕ್ಷಕರು, ಆಗುಂಬೆ ಹೋಬಳಿ	ಗ್ರಾಮ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ.	ಉಪ ತಹಶೀಲ್ದಾರ್, ಮೇಗರವಳ್ಳಿ
3.	ನಾಡ ಕಛೇರಿ, ಕೋಣಂದೂರು	ರಾಜಸ್ವ ನಿರೀಕ್ಷಕರು, ಅಗ್ರಹಾರ ಹೋಬಳಿ	ಗ್ರಾಮ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ	ಉಪ ತಹಶೀಲ್ದಾರ್ ಕೋಣಂದೂರು

4 ಬಿ.(1) 17.

ನಿರ್ದಿಷ್ಟ ಪಡಿಸಬಹುದಾದ ಇತರ ಮಾಹಿತಿಗಳು:

ಕಛೇರಿಯಲ್ಲಿ ಸಾರ್ವಜನಿಕ ಕುಂದು ಕೊರತೆಗಳ ಬಗ್ಗೆ ಅರ್ಜಿಗಳನ್ನು ಪಡೆದು ಹಿಂಬರಹದ ಮೂಲಕ ಅರ್ಜಿದಾರರಿಗೆ ಮಾಹಿತಿ ನೀಡಲಾಗುವುದು.

ದಸ್ತಾವೇಜು ಪ್ರತಿಗಳನ್ನು ಆದೇಶದ ನಕಲುಗಳನ್ನು ಪಡೆಯಲು ಇಚ್ಛಿಸಿದ್ದಲ್ಲಿ ಅರ್ಜಿಯನ್ನು ಸಲ್ಲಿಸಿ ಇದಕ್ಕಾಗಿ ನಿಗದಿಪಡಿಸಿದ ಶುಲ್ಕವನ್ನು ತುಂಬಿ ಗರಿಷ್ಠ 7 ದಿನಗಳು ಒಳಗಾಗಿ ನಕಲು ಪ್ರತಿಗಳನ್ನು ಪಡೆಯುವ ಸೌಲಭ್ಯವನ್ನು ಒದಗಿಸಿ ಕೊಡಲಾಗಿದೆ.

ವಹಿಗಳಲ್ಲಿ ನಮೂದಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಸ್ವೀಕೃತಿ ಪಡೆದು ಪತ್ರಗಳನ್ನು ನೀಡಲಾಗುವುದು ಹಾಗೂ ಸಾರ್ವಜನಿಕ ಮನವಿ ಬಗ್ಗೆ ಪ್ರತ್ಯೇಕ ಸ್ವೀಕೃತಿ ಪತ್ರವನ್ನು ನೀಡಲಾಗುತ್ತದೆ.

ಶಿರಸ್ತೇದಾರ್:

ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಮತ್ತು ಲೆಕ್ಕ ಪತ್ರ ಚುನಾವಣೆ, ಕಂದಾಯ ಕಾನೂನು, ಶಿಷ್ಟಾಚಾರ, ಸ್ವೀಕೃತಿ ಮತ್ತು ರವಾನೆ ಶಾಖೆಗಳ ಶಿರಸ್ತೇದಾರರು ಇರುತ್ತಾರೆ. ಅವರಿಗೆ ವಹಿಸಲಾದ ಶಾಖೆಯ ಮೇಲ್ವಿಚಾರಣೆ ಮಾಡುತ್ತಾರೆ. ಇವರುಗಳು ಕಛೇರಿಯ ಅಧಿಕಾರಿಗಳು ಇವರಿಗೆ ಅಧೀನ ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

ಕಛೇರಿ ಸಿಬ್ಬಂದಿಗಳ ಸಂಕಲನ ಕರ್ತವ್ಯ ನಿರ್ವಹಣೆಗಳು:

ಸಿಬ್ಬಂದಿ ನೇಮಕಾತಿ: ಶಿಸ್ತಿನ ಕ್ರಮ ಕಾರ್ಯನಿರ್ವಹಣೆ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಅಧೀನ ಕಾರ್ಯಾಲಯಗಳು ಮತ್ತು ನಾಡಕಛೇರಿಗಳ ನಿರ್ವಹಣೆ ಮಾಡಲಾಗುವುದು. ಗ್ರಾಮ ಸಹಾಯಕರ ನೇಮಕ ವರ್ಗಾವಣೆಗಳನ್ನು ನಡೆಸುವುದು.

ನೈಸರ್ಗಿಕ ವಿಕೋಪ:

ಬರ ಮತ್ತು ಅತಿವೃಷ್ಟಿಗಳು ಸಂಭವಿಸಿದಾಗ ತುರ್ತು ರಕ್ಷಣಾ ಕ್ರಮಗಳನ್ನು ಜರುಗಿಸುವುದು ಮತ್ತು ಸಂತ್ರಸ್ಥರಿಗೆ ಪರಿಹಾರ ನೀಡಲಾಗುವುದು. ಸಿಡಿಲು ಬಡಿದು ಮೃತ ಪಟ್ಟ ಕುಟುಂಬದವರಿಗೆ ಪರಿಹಾರ ನೀಡಲಾಗುವುದು ಮತ್ತು ಬೆಂಕಿ ಆಕಸ್ಮಿಕ ಸಂಭವಿಸಿದಾಗ ಕ್ರಮ ಕೈಗೊಳ್ಳಲಾಗುತ್ತಿದೆ.

ಭೂ ಮಂಜೂರಾತಿ:

ಕಛೇರಿಯಲ್ಲಿ ಭೂ ಮಂಜೂರಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು ಅಕ್ರಮ ಸಕ್ರಮದ ಸಮಿತಿಗಳಲ್ಲಿ ಮಂಜೂರಾದ ಪ್ರಕರಣಗಳಿಗೆ ಹಕ್ಕು ಪತ್ರ ನೀಡಲಾಗುತ್ತಿದೆ. ಸರ್ಕಾರಿ ಜಮೀನು ಅನಧಿಕೃತ ಅತಿಕ್ರಮಣ ಮಾಡಿರುವುದನ್ನು ಕ್ರಮ ಜರುಗಿಸಿ ತೆರವುಗೊಳಿಸಲಾಗುವುದು.

ಭೂ ಸ್ವಾಧೀನ:

ಭೂ ಸ್ವಾಧೀನತೆಯ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸಲಾಗುವುದು.

ಭೂ ಸುಧಾರಣೆ:

ಕರ್ನಾಟಕ ಭೂ ಸುಧಾರಣೆ ಕಾಯಿದೆ 1961ರಲ್ಲಿ ಅವಕಾಶವಿದ್ದಂತೆ ಕಲಂ 48 ರಡಿಯಲ್ಲಿ ನೇಮಕವಾದ ಭೂ ಸುಧಾರಣಾ ಸಮಿತಿಗೆ ಕಾರ್ಯದರ್ಶಿಯಾಗಿ ಕಾನೂನಿನ ಪರಿಮಿತಿಯಲ್ಲಿ ಕೆಲಸ ನಿರ್ವಹಿಸುವುದು.

ಬೇಡಿಕೆ ವಸೂಲಿ ಬಾಕಿ (ಡಿ.ಸಿ.ಬಿ.):

ಕೃಷಿ ಜಮೀನುಗಳ ಹಿಡುವಳಿಗಳ ಮೇಲೆ ನಿಗದಿಪಡಿಸಿದ ಕಂದಾಯ ನೀರಾವರಿ ಕರ ಮತ್ತು ಇತರೆ ಕಂದಾಯಗಳ ಬೇಡಿಕೆ ಪಟ್ಟಿ ತಯಾರಿಸುವುದು, ವಸೂಲಿ ಮತ್ತು ಬಾಕಿಗಳ ನಿರ್ವಹಣೆ ಕೈಗೊಳ್ಳುವುದು, ಸರ್ಕಾರದ ಇತರೆ ಇಲಾಖೆಗಳಿಂದ ವಸೂಲಿ ಮಾಡದೆ ಇರುವ ತೆರಿಗೆಗಳ ಬಾಕಿಗಳು ಮತ್ತು ಸಾಲಗಳನ್ನು ಬಾಕಿ ಇರುವ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿವರ್ತಿಸಿ ವಸೂಲಿ ಕ್ರಮ ಜರುಗಿಸುವುದು.

ಗಣಿಗಾರಿಕೆ:

ಗಣಿಗಾರಿಕೆಗೆ ಸಂಬಂಧಿಸಿದಂತೆ ಪ್ರಕರಣಗಳ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಜಮಾಬಂದಿ:

ಎಲ್ಲಾ ಕಂದಾಯ ಗ್ರಾಮಗಳ ಜಮೀನುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಕಂದಾಯ ನಿಗದಿ, ವಸೂಲಾತಿ ಮತ್ತು ಬಾಕಿ ವಿವರಗಳನ್ನೊಳಗೊಂಡಂತೆ ಹಾಗೂ ಭೂ ಕಂದಾಯ ಮಾಡುವ ಮತ್ತು ಸರ್ಕಾರಿ ಜಮೀನುಗಳ ವಿವರಗಳನ್ನೊಳಗೊಂಡಂತೆ ವಾರ್ಷಿಕ ಜಮಾಬಂದಿ ನಡೆಸಲಾಗುವುದು.

ಹುಜೂರು ಜಮಾಬಂದಿಗೆ ಸಂಬಂಧಿಸಿದಂತೆ ಟಿಪ್ಪಣಿ ತಯಾರಿಸಿ ಸಹಾಯಕ ಕಮೀಷನರ್ ಶಿವಮೊಗ್ಗ ಅಥವಾ ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು.

ದೇವಸ್ಥಾನ: ವಕ್ಫ್

ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಸ್ಥಾನ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಬಿಡುಗಡೆಯಾದ ತಸ್ಥಿಕ್ ಭತ್ಯೆ ಪಾವತಿಸುವುದು.

ಆರಾಧನಾ ಯೋಜನೆಯಡಿಯಲ್ಲಿ ತಾಲ್ಲೂಕು ಮಟ್ಟದ ಸಮಿತಿಯನ್ನು ಕರೆದು ಧಾರ್ಮಿಕ ಸಂಸ್ಥೆಗಳಿಗೆ ಅನುದಾನದ ಬಗ್ಗೆ ಶಿಫಾರಸ್ಸು ಪಡೆದು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು. ಅನುದಾನ ಮಂಜೂರಾಗಿ ಬಂದ ಧಾರ್ಮಿಕ ಸಂಸ್ಥೆಗಳಿಗೆ ಹಣ ಪಾವತಿಸಿ ಬಳಕೆ ಪ್ರಮಾಣ ಪತ್ರಗಳನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು.

ಲೆಕ್ಕ ಪತ್ರ:

ಕಛೇರಿಯ ಸಿಬ್ಬಂದಿ ವೇತನ, ಪ್ರವಾಸ ಭತ್ಯೆ, ಸಾದಿಲ್ವಾರು ವೆಚ್ಚ, ವಾಹನಗಳ ಇಂಧನ ಮತ್ತು ದುರಸ್ತಿ ವೆಚ್ಚಗಳಿಗೆ ಮಂಜೂರಾದ ಹಣದ ಬಗ್ಗೆ ಬಿಲೆಗಳ ತಯಾರಿಕೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಚುನಾವಣೆ:

ಕೇಂದ್ರ ಚುನಾವಣಾ ಆಯೋಗದಿಂದ ನಿಗದಿಪಡಿಸಿದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಹಾಗೂ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆ ಚುನಾವಣೆಗಳಾದ ತಾಲ್ಲೂಕು ಪಂಚಾಯಿತ್, ಗ್ರಾಮ ಪಂಚಾಯಿತ್, ನಗರ ಪಂಚಾಯಿತ್ ಚುನಾವಣಾ ಕಾರ್ಯಸೂಚಿ ಪ್ರಕಾರ ಚುನಾವಣಾ ಕಾರ್ಯಕ್ರಮಗಳನ್ನು ರೂಪಿಸುವುದು ಚುನಾವಣೆಗೆ ಸಂಬಂಧಿಸಿದ ವ್ಯವಹಾರಗಳ ನಿರ್ವಹಣೆ ಮತ್ತು ಮತದಾರರಿಗೆ ಗುರುತು ಚೀಟಿ ನೀಡುವುದು ಹಾಗೂ ಮತದಾರರ ಪಟ್ಟಿಯ ನಿರ್ವಹಣೆ ಮಾಡುವುದು.

ಸಾರ್ವಜನಿಕ ಕುಂದು ಕೊರತೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಂದ ಬಂದ ಪತ್ರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ಜಿಲ್ಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಕಛೇರಿಯ ಸಿಬ್ಬಂದಿಯ ಕಾರ್ಯನಿರ್ವಹಣೆ ವಿವರ

ಕ್ರ. ಸಂ.	ಹೆಸರು	ಹುದ್ದೆ	ನಿರ್ವಹಿಸುತ್ತಿರುವ ಶಾಖೆಗಳ ವಿವರ
1.	ಹೆಚ್. ರಾಜಪ್ಪ	ತಾಲ್ಲೂಕು ಶಿರಸ್ತೇದಾರ್	1) ಕಛೇರಿ ಆಡಳಿತ ಶಾಖೆಯ ಮೇಲ್ವಿಚಾರಣೆ 2) ಸಾರ್ವಜನಿಕ ಕುಂದು ಕೊರತೆ 3) ಮಾಹಿತಿ ಹಕ್ಕು 4) ಕಛೇರಿ ಹಣಕಾಸಿನ ನಿರ್ವಹಣೆ
2.	ಹೆಚ್. ಸಿದ್ದಪ್ಪ	ಹಕ್ಕು ದಾಖಲೆ ಶಿರಸ್ತೇದಾರ್	1) ಹಕ್ಕು ದಾಖಲೆ 2) ಭೂಮಿ ಕಂಪ್ಯೂಟರ್ 3) ದಾಖಲೆ ಕೊಠಡಿ
3.	ಕೆ. ಶಂಕರರಾವ್	ಚುನಾವಣೆ ಶಿರಸ್ತೇದಾರ್	1) ಎಲ್ಲಾ ಚುನಾವಣೆ ಮತ್ತು ಚುನಾವಣೆ ಶಾಖೆಯ ಮೇಲ್ವಿಚಾರಣೆ.

ಕ್ರ. ಸಂ.	ಹೆಸರು	ಹುದ್ದೆ	ನಿರ್ವಹಿಸುತ್ತಿರುವ ಶಾಖೆಗಳ ವಿವರ
4.	ಹೆಚ್.ಎಸ್. ಶಿವರಾಮ್	ಆಹಾರ ಶಾಖೆ	ಚಿಕ್ಕಬಳ್ಳಾಪುರ ಉಪ ನಿರ್ದೇಶಕರ ಕಛೇರಿಗೆ ನಿಯೋಜನೆಗೊಂಡಿರುತ್ತಾರೆ.
5.	ಶ್ರೀಕಾಂತ್ ಎಸ್. ಹೆಗ್ಡೆ	ಪ್ರ.ದ.ಸ.	1) ಬಗರ್ ಹುಕುಂ ಶಾಖೆ 2) ಅಕ್ರಮ ಸಕ್ರಮ ಶಾಖೆ 3) ರಾಷ್ಟ್ರೀಯ ಹಬ್ಬಗಳು 4) ಮಾಸಿಕ ಪ್ರಗತಿ 5) ಸ್ಟ್ಯಾಂಪ್ ಸಾಲ್ವೆನ್ಸಿ
6.	ಹೆಚ್.ಎಸ್. ಮಂಗಳಗೌರಿ	ಪ್ರ.ದ.ಸ.	1) ಎಲ್.ಆರ್.ಎಫ್ ಮಂಡಗದ್ದೆ ಹೋಬಳಿ 2) ಡಿ.ಸಿ.ಬಿ. 3) ಬಗರ್ ಹುಕುಂ
7.	ಶಾಂತಾರಾಂ	ಪ್ರ.ದ.ಸ.	1) ಪ್ರಕೃತಿ ವಿಕೋಪ 2) ನೆರೆ ಪರಿಹಾರ 3) ಬೆಂಕಿ ಆಕಸ್ಮಿಕ 4) ಎಲ್.ಎನ್.ಡಿ. ಶಾಖೆ. 5) ಇತರೆ ವಸೂಲಿ, 6) ಮುತ್ತೂರು ಹೋಬಳಿ ಡಿ.ಸಿ.ಬಿ 94–ಸಿ ಆಗುಂಬೆ ಹೋಬಳಿ 7) ಆಶ್ರಯ ಯೋಜನೆ, 8) ಬಂದೂಕು ಪರವಾನಿಗೆ, 9) ಟಿ.ಎ.ಬಿಲ್ಸ್ ಬ್ಯಾಂಕ್ ಸಾಲ ವಸೂಲಿ 94–ಸಿ ಮುತ್ತೂರು ಹೋಬಳಿ. 10) ರಾಯಲ್ಟಿ.
8.	ಕೆ. ವಾಸಪ್ಪ	ಪ್ರ.ದ.ಸ	1) ಆರ್.ಕೆ. ಶಾಖೆ. 2) ಅಲನೇಶನ್ 3) ಅಕ್ವಿಜಿಷನ್ 4) ಬಗರ್‌ಹುಕುಂ ಶಾಖೆ
9.	ಎ.ಟಿ. ಕುಮಾರ್	ದ್ವಿ.ದ.ಸ.	1) ಸಿಬ್ಬಂದಿ (1) 2) ಕಾನೂನು ಪದವೀಧರರ ಪ್ರೋತ್ಸಾಹಧನ 3) ಸಿ.ಸಿ.ಎ. 4) ಡಿ.ಸಿ. ಬಿಲ್ಸ್
10.	ಎಲ್. ರಾಘವೇಂದ್ರ	ದ್ವಿ.ದ.ಸ.	1) ಎವಿಕ್ಷನ್ 2) ನೀರಾವರಿ 3) ಪೈಪ್ ಲೈನ್ 4) ಮಾಹಿತಿ ಹಕ್ಕು 5) ಸಾರ್ವಜನಿಕ ಕುಂದುಕೊರತೆ
11.	ಸಿ.ಪಿ. ಫರ್ನಾಂಡಿಸ್	ದ್ವಿ.ದ.ಸ.	1) ಆರ್.ಆರ್.ಟಿ. ಶಾಖೆ 2) ಪೋಡಿ ಕಡತ 3) ಎಂ.ಎ.ಜಿ. 4) ಭೂಮಿ ಮಿಸ್ ಶಾಖೆ
12.	ಬಿ.ಎಸ್. ಶ್ರೀಶೈಲಾ	ದ್ವಿ.ದ.ಸ.	1) ಆದಾಯ–ಜಾತಿ ದೃಢೀಕರಣ ಪತ್ರ 2) ವೃದ್ದಾಪ್ಯ, ವಿಧವಾ, 3) ಅಂಗವಿಕಲ ವೇತನಗಳು 4) ಎಲ್ಲಾ ದೃಢೀಕರಣ 5) ಜನಶ್ರೀ ಯೋಜನೆ
13.	ಎಸ್. ಪ್ರೇಮಲತಾ	ದ್ವಿ.ದ.ಸ.	ಮುಜರಾಯಿ ಶಾಖೆ

ಕ್ರ. ಸಂ.	ಹೆಸರು	ಹುದ್ದೆ	ನಿರ್ವಹಿಸುತ್ತಿರುವ ಶಾಖೆಗಳ ವಿವರ
14.	ಎಸ್. ಶುಭಾ	ದ್ವಿ.ದ.ಸ.	ಉಪ ವಿಭಾಗಾಧಿಕಾರಿಗಳು ಶಿವಮೊಗ್ಗ ರವರ ಕಛೇರಿಗೆ ನಿಯೋಜನೆಗೊಂಡಿರುತ್ತಾರೆ.
15.	ಸತ್ಯನಾರಾಯಣ ಎಸ್.	ದ್ವಿ.ದ.ಸ.	ಉಪವಿಭಾಗಾಧಿಕಾರಿಗಳು ಶಿವಮೊಗ್ಗ ರವರ ಕಛೇರಿಗೆ ನಿಯೋಜನೆಗೊಂಡಿರುತ್ತಾರೆ.
16.	ಕೆ. ಸರಳಾ	ಬೆರಳಚ್ಚುಗಾರರು	ಕಛೇರಿಯ ಕಾಗದ ಪತ್ರಗಳನ್ನು ಬೆರಳಚ್ಚು ಮಾಡುವ ಶಾಖೆ.
17.	ಜಾರ್ಜ್ ಸೇಲಂ		1) ಚುನಾವಣಾ ವಿಷಯ ನಿರ್ವಾಹಕರು 2) ಅಕ್ರಮ ಸಕ್ರಮ
18.	ಎಂ.ಕೆ. ಯಶೋಧ	ದ್ವಿ.ದ.ಸ	ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ ಶಿವಮೊಗ್ಗ ರವರ ಕಛೇರಿಗೆ ನಿಯೋಜನೆಗೊಂಡಿರುತ್ತಾರೆ.
19.	ಟಿ. ರಂಗನಾಥ	ವಾಹನ ಚಾಲಕರು	ವಾಹನ ಚಾಲಕರು
20.	ಬಿ. ವೆಂಕಟೇಶ್ ಆಚಾರ್	ಆರ್.ಆರ್. ಅಟೆಂಡರ್	
21.	ಚೂಡಪ್ಪ	"ಡಿ" ದರ್ಜೆ	
22.	ಎಸ್. ಕೀರ್ತಿ	"ಡಿ" ದರ್ಜೆ	
23.	ಹೆಚ್.ಸಿ. ಮಹೇಶ್	"ಡಿ" ದರ್ಜೆ	
24.	ಎ. ಶಿಲ್ಪಾ ಜ್ಯೋತಿ	"ಡಿ" ದರ್ಜೆ	
25.	ಎ.ಕೆ. ರಾಮಪ್ಪ	ಆಹಾರ ನಿರೀಕ್ಷಕರು	ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಮೇಲ್ವಿಚಾರಣೆ
26.	ಹೆಚ್.ಎಲ್. ಕೃಷ್ಣ ಮೂರ್ತಿಗೌಡ	ಪ್ರ.ದ.ರಾ.ನಿ	ಕಸಬಾ ಹೋಬಳಿ
27.	ಕೆ.ಆರ್. ಮಹಾಬಲೇಶ್ವರ	ಪ್ರ.ದ.ರಾ.ನಿ	ಮುತ್ತೂರು ಹೋಬಳಿ
28.	ಸಿ. ಕೃಷ್ಣಮೂರ್ತಿ	ಪ್ರ.ದ.ರಾ.ನಿ	ಮಂಡಗದ್ದೆ ಹೋಬಳಿ
29.	ವಿಷ್ಣುಮೂರ್ತಿ	ಪ್ರ.ದ.ರಾ.ನಿ	ಆಗುಂಬೆ ಹೋಬಳಿ
30.	ಚಂದ್ರಶೇಖರ್ ನಾಯ್ಡು	ಪ್ರ.ದ.ರಾ.ನಿ	ಅಗ್ರಹಾರ ಹೋಬಳಿ
31.	ಎನ್. ದೇವೇಂದ್ರಪ್ಪ	ಪರ್ಯಾವೇಕ್ಷಕರು	ಸರ್ವೆ ಶಾಖೆಯ ಮೇಲ್ವಿಚಾರಣೆ
32.	ಶಿವಾನಂದ	ಪ್ರ.ದ.ಭೂ	ಸರ್ವೆಯರ್
33.	ಸುಷ್ಮ	ದ್ವಿ.ದ.ಭೂ	ಸರ್ವೆಯರ್
34.	ಜಿ.ಎಂ. ಕೆಂಪಣ್ಣ	ದ್ವಿ.ದ.ಭೂ	ಸರ್ವೆಯರ್
35.	ಪಿ.ಜಿ. ಪ್ರಕಾಶ್	ದ್ವಿ.ದ.ಭೂ	ಸರ್ವೆಯರ್
36.	ಬಿ.ಎ. ರಂಗರಾವ್	ದ್ವಿ.ದ.ಭೂ	ಸರ್ವೆಯರ್
37.	ಎಂ.ಇ. ಸೋಮಶೇಖರ್	ದ್ವಿ.ದ.ಭೂ	ಸರ್ವೆಯರ್
38.	ಉಮೇಶ	ಬಾಂದು ಜವಾನ	
39.	ಚೋಕ್ಲಾನಾಯ್ಕ	ಬಾಂದು ಜವಾನ	
40.	ಸಗೀರ್ ಅಹಮ್ಮದ್	ಬಾಂದು ಜವಾನ	
41.	ಸುಬ್ರಹ್ಮಣ್ಯ	ಬಾಂದು ಜವಾನ	
42	ಕೆ. ಪ್ರಶಾಂತ	ದ್ವಿ.ದ.ಸ.	ನಾಡಕಛೇರಿ ಕೋಣಂದೂರು ಕಛೇರಿಯ ಎಲ್ಲಾ ಪತ್ರಗಳು ಹಾಗೂ 1) ಡಿ.ಸಿ.ಬಿ. 2) ಕಡತ ನಿರ್ವಹಣೆ
43.	ಮರಿಯಪ್ಪ	ದ್ವಿ.ದ.ಸ.	ನಾಡಕಛೇರಿ ಮೇಗರವಳ್ಳಿ ಕಛೇರಿಯ ಎಲ್ಲಾ ಪತ್ರಗಳು ಹಾಗೂ ಕಡತ ನಿರ್ವಹಣೆ.

ತಾಲ್ಲೂಕು ಕಛೇರಿ ತೀರ್ಥಹಳ್ಳಿ–ಗ್ರಾಮ ಲೆಕ್ಕಗರು ಕಾರ್ಯನಿರ್ವಹಿಸುತ್ತಿರುವ ವಿವರ:

ಕ್ರ. ಸಂ.	ಗ್ರಾ.ಲೆ. ಹೆಸರು	ಹುದ್ದೆ	ಕಾರ್ಯನಿರ್ವಹಿಸುತ್ತಿರುವ ವೃತ್ತ
1.	ಎಸ್. ನಾಗರಾಜ	ಗ್ರಾಮ ಲೆಕ್ಕಿಗರು	1) ಮುಳಬಾಗಿಲು ವೃತ್ತ 2) ಕೋಡ್ಲು ವೃತ್ತ (ಹೆಚ್ಚುವರಿ ಪ್ರಭಾರ)
2.	ಎ. ವಿಲ್ಸನ್	ಗ್ರಾಮ ಲೆಕ್ಕಿಗರು	1) ಕುಡುಮಲ್ಲಿಗೆ ವೃತ್ತ 2) ಯಡೇಹಳ್ಳಿ ವೃತ್ತ
3.	ಗೌರೀಶ ಬಿ.	ಗ್ರಾಮ ಲೆಕ್ಕಿಗರು	1) ಮೇಲಿನಕುರುವಳ್ಳಿ
4.	ಹೆಚ್.ಎಂ. ಚಂದ್ರಶೇಖರಪ್ಪ	ಗ್ರಾಮ ಲೆಕ್ಕಿಗರು	ಅರಳಾಪುರ ವೃತ್ತ
5.	ಜಿ. ಕರಿಬಸಪ್ಪ	ಗ್ರಾಮ ಲೆಕ್ಕಿಗರು	ಆರಗ ವೃತ್ತ
6.	ಇಕ್ಬಾಲ್ ಅಹಮ್ಮದ್	ಗ್ರಾಮ ಲೆಕ್ಕಿಗರು	ಹೊಸಹಳ್ಳಿ ವೃತ್ತ
7.	ಹೆಚ್. ಹರೀಶ್ ಕುಮಾರ್	ಗ್ರಾಮ ಲೆಕ್ಕಿಗರು	ನೆರೆಟೂರು ವೃತ್ತ
8.	ಎಸ್.ಎಸ್. ಹರ್ಷವರ್ಧನ	ಗ್ರಾಮ ಲೆಕ್ಕಿಗರು	1) ತೆಂಗಿನಕೊಪ್ಪ ವೃತ್ತ 2) ಸಾಲೂರು ವೃತ್ತ (ಹೆಚ್ಚುವರಿ ಪ್ರಭಾರ)
9.	ಎ.ಎಸ್. ಯಶವಂತ ಕುಮಾರ್	ಗ್ರಾಮ ಲೆಕ್ಕಿಗರು	1) ಹೆದ್ದೂರು ವೃತ್ತ 2) ಶೇಡ್ಗಾರು ವೃತ್ತ (ಹೆಚ್ಚುವರಿ ಪ್ರಭಾರ)
10.	ಪಿ. ರಮೇಶ್	ಗ್ರಾಮ ಲೆಕ್ಕಿಗರು	1) ಹಾರೋಗೋಳಿಗೆ ವೃತ್ತ 2) ಬಸವಾನಿ ವೃತ್ತ (ಹೆಚ್ಚುವರಿ ಪ್ರಭಾರ)
11.	ಯು. ವೆಂಕಟೇಶ್	ಗ್ರಾಮ ಲೆಕ್ಕಿಗರು	1) ದೇವಂಗಿ ವೃತ್ತ 2) ಮೇಳಿಗೆ ವೃತ್ತ (ಹೆಚ್ಚುವರಿ ಪ್ರಭಾರ)
12.	ಕೆ.ಎಂ. ಪ್ರಕಾಶ್	ಗ್ರಾಮ ಲೆಕ್ಕಿಗರು	1) ಸಾಲ್ಗಡಿ ವೃತ್ತ 2) ಹೇರಂಭಾಪುರ ವೃತ್ತ, (ಹೆಚ್ಚುವರಿ ಪ್ರಭಾರ)
13.	ಕೆ.ಎಸ್. ಸುಬ್ರಹ್ಮಣ್ಯ	ಗ್ರಾಮ ಲೆಕ್ಕಿಗರು	1) ಲಿಂಗಾಪುರ ವೃತ್ತ 2) ಜಂಬುವಳ್ಳಿ ವೃತ್ತ (ಹೆಚ್ಚುವರಿ ಪ್ರಭಾರ)
14.	ಎಸ್.ಹೆಚ್. ರಾಘವಯ್ಯ	ಗ್ರಾಮ ಲೆಕ್ಕಿಗರು	1) ಸಿಂಗನಬಿದರೆ ವೃತ್ತ 2) ಮಾಳೂರು ವೃತ್ತ (ಹೆಚ್ಚುವರಿ ಪ್ರಭಾರ)
15.	ಎ.ವಿ. ಅಶೋಕ್‌ಕುಮಾರ್	ಗ್ರಾಮ ಲೆಕ್ಕಿಗರು	ಗುತ್ತಿಯಡೇಹಳ್ಳಿ ವೃತ್ತ
16.	ಸಿದ್ದಪ್ಪ ವಾಸನಾದ	ಗ್ರಾಮ ಲೆಕ್ಕಿಗರು	1) ಶೀಕೆ ವೃತ್ತ 2) ತೂದೂರು ವೃತ್ತ (ಹೆಚ್ಚುವರಿ ಪ್ರಭಾರ)
17.	ಆರ್. ರಾಮಚಂದ್ರ	ಗ್ರಾಮ ಲೆಕ್ಕಿಗರು	1) ಬ್ಯಾಂಡ್ಯ ವೃತ್ತ 2) ಮಹಿಷಿ ವೃತ್ತ (ಹೆಚ್ಚುವರಿ ಪ್ರಭಾರ)
18.	ಆರ್. ಸತೀಶ	ಗ್ರಾಮ ಲೆಕ್ಕಿಗರು	1) ಕನ್ನಂಗಿ ವೃತ್ತ
19.	ಹೆಚ್.ಎಸ್. ಸುಧೀರ್	ಗ್ರಾಮ ಲೆಕ್ಕಿಗರು	ಮೇಗರವಳ್ಳಿ ವೃತ್ತ
20.	ಎಂ. ಗುಂಡಪ್ಪ	ಗ್ರಾಮ ಲೆಕ್ಕಿಗರು	ಬಿದರಗೋಡು ವೃತ್ತ
21.	ಕೆ.ಜಿ. ಜಗದೀಶ	ಗ್ರಾಮ ಲೆಕ್ಕಿಗರು	ಕೆಸಲೂರು ವೃತ್ತ
22.	ಎ. ನಾಗರಾಜಪ್ಪ	ಗ್ರಾಮ ಲೆಕ್ಕಿಗರು	1) ಹೊನ್ನೆತಾಳು ವೃತ್ತ 2) ಹುರುಳಿ (ಹೆಚ್ಚುವರಿ ಪ್ರಭಾರ)
23.	ಬಿ.ಟಿ. ಸತೀಶ	ಗ್ರಾಮ ಲೆಕ್ಕಿಗರು	ಅರೇಹಳ್ಳಿ ವೃತ್ತ
24.	ಟಿ.ಆರ್. ಸುಮಾ	ಗ್ರಾಮ ಲೆಕ್ಕಿಗರು	ಸಾಲೂರು ವೃತ್ತ
25.	ಎ. ನರಸಿಂಹಮೂರ್ತಿ	ಗ್ರಾಮ ಲೆಕ್ಕಿಗರು	ತೀರ್ಥಮತ್ತೂರು ವೃತ್ತ
26.	ಪ್ರಭಾಕರಮೂರ್ತಿ ಜೆ.ಹೆಚ್.ಬಿ.	ಗ್ರಾಮ ಲೆಕ್ಕಿಗರು	ಕೋಣಂದೂರು ವೃತ್ತ

ಕ್ರ. ಸಂ.	ಗ್ರಾ.ಲೆ. ಹೆಸರು	ಹುದ್ದೆ	ಕಾರ್ಯನಿರ್ವಹಿಸುತ್ತಿರುವ ವೃತ್ತ
27.	ಎಸ್.ಕೆ. ಮಂಜುನಾಥ	ಗ್ರಾಮ ಲೆಕ್ಕಿಗರು	ಹಾದಿಗಲ್ಲು
28.	ಮಂಜುನಾಥ	ಗ್ರಾಮ ಲೆಕ್ಕಿಗರು	1) ತ್ರಿಯಂಬಕಪುರ ವೃತ್ತ 2) ಗುಡ್ಡೆಕೊಪ್ಪ ವೃತ್ತ (ಹೆಚ್ಚುವರಿ ಪ್ರಭಾರ)
29.	ಎಂ.ಎಸ್. ಶಿವಪ್ರಸಾದ್	ಗ್ರಾಮ ಲೆಕ್ಕಿಗರು	ನೊಣಬೂರು ವೃತ್ತ
30.	ಎಂ. ರಘು	ಗ್ರಾಮ ಲೆಕ್ಕಿಗರು	ಹುಂಚದಕಟ್ಟೆ ವೃತ್ತ
31.	ಎನ್.ಟಿ. ಉಮೇಶ್	ಗ್ರಾಮ ಲೆಕ್ಕಿಗರು	ದೇಮ್ಲಾಪುರ ವೃತ್ತ
32.	ಬಿ.ಜಿ. ಸುರಥಕುಮಾರ್	ಗ್ರಾಮ ಲೆಕ್ಕಿಗರು	ಅರಳಸುರಳಿ ವೃತ್ತ
33.	ಇನಾಯತ್ ಉಲ್ಲಾಖಾನ್	ಗ್ರಾಮ ಲೆಕ್ಕಿಗರು	ತಾಲ್ಲೂಕು ಕಛೇರಿ ಮುಟೇಷನ್ ಕಿಯಾಸ್ಕಗೆ ನಿಯೋಜನೆ
34.	ಹೆಚ್.ಬಿ. ಕುಮಾರಸ್ವಾಮಿ	ಗ್ರಾಮ ಲೆಕ್ಕಿಗರು	ವಿಷಯ ನಿರ್ವಾಹಕರಾಗಿ ನಿಯೋಜನೆ 1) ಚುನಾವಣಾ ಶಾಖೆ 2) ಮಾಫಿ ಪಾಸ್
35.	ಸಿ.ಎಸ್. ಬಸವರಾಜ್	ಗ್ರಾಮ ಲೆಕ್ಕಿಗರು	ತಾಲ್ಲೂಕು ಕಛೇರಿ ಭೂಮಿ ಕಂಪ್ಯೂಟರ್ ಆಪರೇಟರ್‌ರಾಗಿ ನಿಯೋಜನೆ
36.	ಕೆ.ಸಿ. ಆಶಾ	ಗ್ರಾಮ ಲೆಕ್ಕಿಗರು	ವಿಷಯ ನಿರ್ವಾಹಕರಾಗಿ ನಿಯೋಜನೆ 1) ರಾಷ್ಟ್ರೀಯ ಕುಟುಂಬ 2) ಅಂತ್ಯ ಸಂಸ್ಕಾರ
37.	ಬಿ.ಪಿ. ಬೈರೇಶ	ಗ್ರಾಮ ಲೆಕ್ಕಿಗರು	ವಿಷಯ ನಿರ್ವಾಹಕರಾಗಿ ನಿಯೋಜನೆ 1) ಸಿಬ್ಬಂದಿ ಶಾಖೆ
38.	ಎ.ಎಸ್. ಗಿರಿರಾಜ್	ಗ್ರಾಮ ಲೆಕ್ಕಿಗರು	ವಿಷಯ ನಿರ್ವಾಹಕರಾಗಿ ನಿಯೋಜನೆ 1) ಜನ ಸಂವೇದನ
39.	ಟಿ.ಎಂ. ರವಿಕುಮಾರ್	ಗ್ರಾಮ ಲೆಕ್ಕಿಗರು	ತಾಲ್ಲೂಕು ಕಛೇರಿ ಪಹಣಿ ಕಿಯಾಸ್ಕಗೆ ನಿಯೋಜನೆ
40.	ಜಿ. ಸತ್ಯನಾರಾಯಣ	ಗ್ರಾಮ ಲೆಕ್ಕಿಗರು	ಮೇಳಿಗೆ ವೃತ್ತ, ಹಾಲಿ ನಿಯೋಜನೆ ಮೇರೆಗೆ, ಶಿವಮೊಗ್ಗ ತಾಲ್ಲೂಕು ಗಾಡಿಕೊಪ್ಪ ವೃತ್ತಕ್ಕೆ ನಿಯೋಜನೆ.
41.	ದತ್ತಪ್ಪ ರಾಯ್ಕರ್	ಗ್ರಾಮ ಲೆಕ್ಕಿಗರು	ತಲ್ಲೂರು ವೃತ್ತ ಇವರು ಅನಾರೋಗ್ಯದ ನಿಮಿತ್ತ ರಜೆಯಲ್ಲಿರುತ್ತಾರೆ.

ಸಭೆ ಮತ್ತು ರಾಷ್ಟ್ರೀಯ ಹಬ್ಬಗಳು:

ತಾಲ್ಲೂಕಿನಲ್ಲಿ ನಡೆಯುವ ಎಲ್ಲಾ ಉತ್ಸವ ರಾಷ್ಟ್ರೀಯ ಹಬ್ಬಗಳು ಮತ್ತು ತಾಲ್ಲೂಕು ಅಭಿವೃದ್ಧಿ ಕಾರ್ಯಕ್ರಮ ಬಗ್ಗೆ ಜರುಗುವ ಸಭೆ–ಸಮಾರಂಭಗಳನ್ನು ನಿರ್ವಹಣೆ ಮಾಡುವುದು.

ಅಭಿ ಲೇಖಾಲಯ:

ಕಛೇರಿಯ ಪ್ರತಿಯೊಂದು ಶಾಖೆಯಿಂದ ನಿರ್ವಹಣೆಗಾಗಿ ಕಛೇರಿ ಸಹಕಾರದಿಂದ ಬೇರೆ ಬೇರೆ ಬಾಕಿಯ ವಿಲೆಗಳ ಬೇರೆ ಬೇರೆ ವರ್ಗಗಳ ಕಾಗದ ಪತ್ರಗಳನ್ನು ಎಷ್ಟು ಕಾಲ ಕಾಯ್ದಿರಿಸಬೇಕೆಂಬುದನ್ನು ತಿಳಿದು ಈ ಕೆಳ ಕಾಣಿಸಿದ ಪ್ರಕಾರ ವಿಭಜನೆ ಮಾಡಲಾಗುವುದು. ಶ್ರೇಣಿವಾರು ಹೊಂದಿಸಿ ಇಡಲಾಗುವುದು.

"ಎ" ಡಿಸ್– ಅನಿರ್ದಿಷ್ಟ (ಖಾಯಂ)

"ಬಿ" ಡಿಸ್–30 ವರ್ಷಗಳು

"ಸಿ" ಡಿಸ್–10 ವರ್ಷಗಳು

"ಡಿ" ಡಿಸ್–05 ವರ್ಷಗಳು

"ಇ" ಡಿಸ್–01 ವರ್ಷ

ಮೇಲೆ ಕಾಣಿಸಿದ ವಿಲೇವಾರಿಗಳ ಅವಧಿ ಮುಗಿದ ನಂತರ ಕಛೇರಿಯ ಮುಖ್ಯಸ್ಥರ ಆದೇಶವನ್ನು ಪಡೆದು "ಎ" ಮತ್ತು "ಬಿ" ಡಿಸ್ ಗಳಲ್ಲಿನ ಕಡತಗಳನ್ನು ಹೊರತುಪಡಿಸಿ ನಾಶಗೊಳಿಸಲಾಗುವುದು.

ಕಾರ್ಯಾಲಯದ ಪೀಠೋಪಕರಣ ಕಾರ್ಯನಿರ್ವಹಣೆ ಯಂತ್ರ ಸಾಮಾಗ್ರಿಗಳ ಖರೀದಿ ಮತ್ತು ದುರಸ್ತಿ ಕಾರ್ಯದ ವ್ಯವಹಾರಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿ ಖರೀದಿ ಮತ್ತು ವಿತರಣೆ ಕಛೇರಿಯ ಸುವ್ಯವಸ್ಥೆ ವಿದ್ಯುದ್ಧೀಕರಣ ನಿರ್ವಹಣೆ ವಿವಿಧ ಕಾಯ್ದೆ ಅಡಿ ಇರುವ ಎಲ್ಲಾ ಪುಸ್ತಕಗಳನ್ನು ಸುಸ್ಥಿತಿಯಲ್ಲಿ ಇಡುವುದು ಮತ್ತು ಸಂಬಂಧಪಟ್ಟ ಕಡತಗಳನ್ನು ನೀಡುವುದು ಅಲ್ಲದೇ ಸಾರ್ವಜನಿಕರು ಕೋರುವ ದಾಖಲೆಗಳನ್ನು ನಿಯಮಾನುಸಾರ ನೀಡಲಾಗುತ್ತದೆ.

ಸಾಮಾಜಿಕ ಭದ್ರತಾ ಯೋಜನೆ:

ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಬರುವ ಫಲಾನುಭವಿಗಳಿಗೆ ಅನುದಾನ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾದ ನಂತರ ಪಾವತಿಸುವುದು. ವೃದ್ದಾಪ್ಯ, ಅಂಗವಿಕಲ, ವಿಧವಾ, ರಾಷ್ಟ್ರೀಯ ಕುಟುಂಬ, ಅಂತ್ಯಸಂಸ್ಕಾರ, ಸಂಧ್ಯ ಸುರಕ್ಷಾ ವೇತನದಾರರಿಗೆ ಮಂಜೂರಾತಿ ಪತ್ರ ನೀಡಲಾಗುವುದು. ಜಾತಿ ಮತ್ತು ಆದಾಯ ಹಾಗೂ ವಾಸ್ತವ್ಯ ಪ್ರಮಾಣ, ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವುದು ಮತ್ತು ನಿರ್ವಹಣೆ.

ಸ್ವೀಕೃತಿ:

ಕಛೇರಿಗೆ ಸ್ವೀಕೃತವಾಗುವ ಸರ್ಕಾರದ ಅಧೀನ ಕಾರ್ಯಾಲಯದ ಮತ್ತು ಜಿಲ್ಲಾಧಿಕಾರಿಗಳ ಮತ್ತು ಸಹಾಯಕ ಕಮೀಷನರ್ ಸಾರ್ವಜನಿಕರ ಮತ್ತು ಸ್ಥಳೀಯ ಸಂಸ್ಥೆಯ ಸದಸ್ಯರುಗಳಿಂದ ಸ್ವೀಕೃತವಾಗುವ ಅರ್ಜಿಗಳಿಗೆ ಮತ್ತು ಪತ್ರಗಳಿಗೆ ತನಿಖೆ ನಡೆಸಿ ಕ್ಷಿಪ್ರ ಸಮಯದಲ್ಲಿ ಮಾಹಿತಿಯನ್ನು ನೀಡಲಾಗುವುದು.

ತಹಶೀಲ್ದಾರ್,
ತೀರ್ಥಹಳ್ಳಿ ತಾಲ್ಲೂಕು.

ಪಿ.ಆರ್.157

KARNATAKA STATE CONSUMER DISPUTES REDRESSAL COMMISSION BASAVA BHAVANA, HIGH GROUNDS, BANGALORE-560001

NOTIFICATION

No. KSC/ Adm/48/2003-04, Dated:9th February, 2009

This is to notify that in between the summer vacation period from 27th day of April 2009 to 24th day of May 2009 (bdi), Karnataka State Consumer Disputes Redressal Commission will conduct "State Commission Sittings" on the following day to hear urgent and other matters, which are to be posted for Admission, hearing and Arguments.

Sl. No.	Days	Dates
1.	Tuesday	28.04.2009
2.	Thursday	30.04.2009
3.	Tuesday	05.05.2009
4.	Thursday	07.05.2009
5.	Tuesday	12.05.2009
6.	Thursday	14.05.2009
7.	Tuesday	19.05.2009
8.	Thursday	21.05.2009

By Order of the Hon'ble President,

C. HALAPPA

Registrar Cum Administrative Officer, Karnataka State Consumer Disputes Redressal Commission, Bangalore.

PR-156

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘ ನಿ. ದೊಡ್ಡಮಲ್ಲಾಪುರ, ಚನ್ನಗಿರಿ–ತಾ: ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ:1) ಈ ಕಛೇರಿ ಸಮಸಂಖ್ಯೆ: ಆದೇಶ ದಿನಾಂಕ:31.12.2003.

2) ಸಹಕಾರ ಅಭಿವೃದ್ಧಿ ಅಧಿಕಾರಿ, ಚನ್ನಗಿರಿ ಇವರು ಸಲ್ಲಿಸಿರುವ ಪ್ರಸ್ತಾವೆ ಪತ್ರ ಸಂ:ಸಅಅ/ ಚನ್ನಗಿರಿ/ ಎಲ್‌ಕ್ಯೂಡಿ/ 2004–05, ದಿನಾಂಕ:30.01.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ: ಸಸಸನಿ–24/ ಮಾರಾಟ/ ಹಾಲು/ 11883/ 1985–86 ದಿನಾಂಕ:16.10.1984 ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಚನ್ನಗಿರಿ, ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಉಲ್ಲೇಖ (2)ರ ರೀತ್ಯಾ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ: ನೋಂದಣಿ ರದ್ಧತಿ: ಸಿಆರ್–17: 2003–04, ದಿನಾಂಕ:31ನೇ ಜನವರಿ, 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69: ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ, ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಹಾಲು ಉತ್ಪಾದಕರ ಸಹಕಾರ ಸಂಘ ನಿ., ದೊಡ್ಡಮಲ್ಲಾಪುರ, ಚನ್ನಗಿರಿ–ತಾ: ಇದರ ನೋಂದಣಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯ ಚಟುವಟಿಕೆಗಳು ನಿಂತು ಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ, ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:31.01.2009ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.164

ಸಾರಿಗೆ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಾರಿಇ 317 ಸಾಇಪ 2007, ಬೆಂಗಳೂರು, ದಿನಾಂಕ:31ನೇ ಜನವರಿ, 2009

ಶ್ರೀ ದೂಮನಿಕ್ಯೂ ಕಾಸೆ, ಕೌನ್ಸೆಲ್ ಜನರಲ್ ಆಫ್ ಫ್ರಾನ್ಸ್, ಹಾಲಿ ಬೆಂಗಳೂರು ಇವರ ಖಾಸಗಿ ವಾಹನದ ಸಂಖ್ಯೆ03 CC-1A (Laura L & K-1.9 TDI-MT) ವಾಹನಕ್ಕೆ ರಸ್ತೆ ತೆರಿಗೆ ಮತ್ತು ನೋಂದಣಿ ಶುಲ್ಕದಿಂದ ವಿನಾಯಿತಿ ನೀಡಿದ ದಿನಾಂಕ:22.12.2008ರ ಅಧಿಸೂಚನೆ ಸಂಖ್ಯೆ: TRD/317/SAEPA/2008 ರಲ್ಲಿನ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಆರ್. ಚಂದ್ರಶೇಖರಾರಾಧ್ಯ
ಪೀಠಾಧಿಕಾರಿ,
ಸಾರಿಗೆ ಇಲಾಖೆ.

ಪಿ.ಆರ್.165